ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2016 ಮಾಸ ಪತ್ರಿಕೆ

ಸಂಪುಟ : 38
ಸಂಚಿಕೆ : 11
ಪುಟ : 12
ಬೆಲೆ : ₹ 10/-



## ಸ್ವಾತಂತ್ರ್ಯ 70

## ಸಾವಿರಾರು ಜನರ ಬಲಿದಾನದಿಂದ





ಬೆಂಗಳೂರು ಉತ್ತರ, ದಕ್ಷಿಣ ಜಿಲ್ಲೆಗಳ ಪ್ರತಿಭಾ ಪುರಸ್ಕಾರ ............................................ 6

A Journal of Karnataka State Secondary Teachers' Association

# ಸಂಪಾದಕೀಯ

ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ. ಶಿಕ್ಷಕರ ದಿನಾಚರಣೆ ಎಂದರೆ ನೆನಪಿಗೆ ಬರುವುದು ಡಾ॥ ರಾಧಾಕೃಷ್ಣನ್‌ರವರ ಹೆಸರು. ರಾಧಾಕೃಷ್ಣನ್‌ರವರು ಆದರ್ಶ ಶಿಕ್ಷಕರೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಎಲೆ ಮರೆಯ ಕಾಯಿಯಂತೆ ಶಿಕ್ಷಣದ ಕಾಯಕವನ್ನು ತಮ್ಮ ಪಾಡಿಗೆ ಮಾಡಿಕೊಂಡು ಬಂದ ಶಿಕ್ಷಕರು ಹಲವರು ಇದ್ದಾರೆ. ಅವರಲ್ಲಿ ಸ್ಮರಣೀಯರು ತ.ಸು ಶಾಮರಾಯರು. ಶಾಮರಾಯರು ಮೂಲತಃ ಚಿತ್ರದುರ್ಗ ಜಿಲ್ಲೆಯ ತಳುಕಿನವರು. ಕನ್ನಡ ಸಾಹಿತ್ಯದ ಪ್ರಸಿದ್ಧ ವಿದ್ವಾಂಸರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಪ್ರಾಧ್ಯಾಪಕರು. ಶಿಷ್ಯರಿಗೆ ಅವರು ಕೇವಲ ಪಾಠವನ್ನಷ್ಟೇ ಮಾಡುತ್ತಿರಲಿಲ್ಲ. ಬದಲಾಗಿ ಶಿಷ್ಯರ ವ್ಯಾಸಂಗಕ್ಕೆ ನೆರವಾಗಲು ಎಲ್ಲಾ ರೀತಿಯ ನೆರವನ್ನು ನೀಡುತ್ತಿದ್ದರು. ಅವರ ಮನೆಯಲ್ಲಿ ಅವರ ಮಕ್ಕಳ ಜೊತೆಗೆ ಪ್ರತಿನಿತ್ಯ ಊಟ ಮಾಡುತ್ತಿದ್ದ ವಿದ್ಯಾರ್ಥಿಗಳೆಷ್ಟೋ. ಶುಲ್ಕ ಕಟ್ಟಲಾಗದೆ ಕಷ್ಟ ಪಡುತ್ತಿದ್ದ ಅನೇಕ ವಿದ್ಯಾರ್ಥಿಗಳ ಕಾಲೇಜು ಶುಲ್ಕ, ಪರೀಕ್ಷಾ ಶುಲ್ಕಗಳನ್ನು ಶ್ಯಾಮರಾಯರೇ ಕಟ್ಟಿದ ನಿದರ್ಶನಗಳು ಅನೇಕ. ಹೀಗೆ ತ.ಸು ಶಾಮರಾಯರ ಆಶ್ರಯದಲ್ಲಿ ಅನೇಕರು ಪ್ರಖ್ಯಾತರಾಗಿದ್ದು ಇಂದಿಗೂ ಶಾಮರಾಯರನ್ನು ನೆನಪಿಸಿಕೊಳ್ಳುತ್ತಾರೆ. ಶಾಮರಾಯರ ನೆರವು ಪಡೆದವರಲ್ಲಿ ರಾಷ್ಟ್ರಕವಿಗಳಾಗಿ, ಪ್ರಖ್ಯಾತ ಕವಿಗಳಾಗಿದ್ದ ಜಿ.ಎಸ್. ಶಿವರುದ್ರಪ್ಪನವರು, 'ನೀರ್‌ಸಾಬ್' ಎಂದೇ ಪ್ರಸಿದ್ಧರಾಗಿದ್ದ ನಜೀರ್ ಸಾಬ್, ಹಾಗೂ ಕನ್ನಡದ ಪ್ರಸಿದ್ಧ ಕವಿಗಳಾದ ಡಾ॥ ಎನ್.ಎಸ್ ಲಕ್ಷ್ಮೀನಾರಾಯಣ ಭಟ್ಟರು, ಮಾಜಿ ಮುಖ್ಯಂತ್ರಿ ಎಸ್. ಬಂಗಾರಪ್ಪ ... ಕೆಲವರು ಹೀಗೆ ಮನ ಮಿಡಿಯುವ, ಮಗುವಿನಂತಹ ಮನಸ್ಸಿನ, ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರಾದ ತ.ಸು ಶಾಮರಾಯರನ್ನು ಶಿಕ್ಷಕ ದಿನಾಚರಣೆಯ ಸಂದರ್ಭದಲ್ಲಿ ಸ್ಮರಿಸುವುದು ಶಿಕ್ಷಕರಾದ ನಮಗೆ ಆದರ್ಶವಲ್ಲವೇ? ತ.ಸು ಶಾಮರಾಯರು ಕಾಲವಾದದ್ದು ಆಗಸ್ಟ್ 21 ರಂದು.

ಕನ್ನಡದ ಸಾಹಿತ್ಯೋಪಾಸಕರಾದ ಡಾ॥ ವಿ.ಕೃ. ಗೋಕಾಕ್, ಕಡೆಂಗೋಡ್ಲು ಶಂಕರಭಟ್ಟರು, ಎಂ.ಆರ್.ಶ್ರೀನಿವಾಸ ಮೂರ್ತಿ, ಯಶವಂತ ಚಿತ್ತಾಲ, ಕೆ. ಜಿ. ಕುಂದಣಗಾರ, ಚೆನ್ನಪ್ಪ ಉತ್ತಂಗಿ ಇವರೆಲ್ಲರೂ ತಮ್ಮ ಕ್ಷೇತ್ರಗಳಲ್ಲಿ ಮೇರು ಸಾಧಕರು. ಈ ಎಲ್ಲಾ ಸಾಹಿತ್ಯ ಸಾಧಕರು ಜನಿಸಿದ್ದು ಆಗಸ್ಟ್ ತಿಂಗಳಿನಲ್ಲಿ. ಹಾಗೆಯೇ ಸಾಹಿತ್ಯೋಪಾಸಕರಾದ ಮಧುರಚೆನ್ನ, ಸು.ರಂ ಎಕ್ಕುಂಡಿ, ಕೆ.ಜಿ ಕುಂದಣಗಾರ, ಚನ್ನಪ್ಪ ಉತ್ತಂಗಿ ಇವರುಗಳು ಮರಣಿಸಿದ್ದು ಆಗಸ್ಟ್ ಮಾಹೆಯಲ್ಲಿ. ಈ ಎಲ್ಲ ಮಹನೀಯರನ್ನು ಸ್ಮರಿಸುವುದರೊಂದಿಗೆ ಅವರ ಸಾಧನೆಯ ಪರಿಚಯವನ್ನು ಮಾಡಿಕೊಳ್ಳುವುದು ಅವಶ್ಯವಲ್ಲವೇ?

ಒಂದು ರಾಷ್ಟ್ರ ಏಳಿಗೆ ಹೊಂದಬೇಕಾದರೆ ಆ ರಾಷ್ಟ್ರದ ಎಲ್ಲ ಪ್ರಜೆಗಳೂ ಶಿಕ್ಷಣ ಪಡೆಯಬೇಕು. ಅದಕ್ಕಾಗಿಯೇ ಸರ್ಕಾರ ಎಲ್ಲ ಮಕ್ಕಳಿಗೂ ಉಚಿತ, ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದೆ. ಅಷ್ಟೇ ಅಲ್ಲದೆ ಮಕ್ಕಳು ಶಾಲೆಯನ್ನು ಅರ್ಧದಲ್ಲಿ ಬಿಡಬಾರದೆಂದು ಅವರಿಗೆ ಎಲ್ಲಾ ಸೌಲಭ್ಯಗಳನ್ನೂ ಸರ್ಕಾರವೇ ನೀಡುತ್ತಿದೆ. ಆದರೆ ಓದು ಬರಹ ಬಾರದ ಯುವಕರು, ಹಿರಿಯರ ಸ್ಥಿತಿ ಏನು? ಅವರನ್ನು ವಿದ್ಯಾವಂತರನ್ನಾಗಿಸಲು ಸರ್ಕಾರ ಸಾಕ್ಷರತಾ ಮಿಷನ್, ರಾತ್ರಿ ಶಾಲೆಗಳು ಹಾಗೂ ಮುಕ್ತ ಶಾಲೆ, ವಿಶ್ವವಿದ್ಯಾಲಯಗಳ ಮೂಲಕ ಪ್ರಯತ್ನಗಳನ್ನು ಮಾಡುತ್ತಿದೆ. ಶಿಕ್ಷಣದ ಮಹತ್ವವನ್ನು ನೆನಪಿಸುವ ಸಲುವಾಗಿ ಪ್ರತಿವರ್ಷ ಆಗಸ್ಟ್ 8 ರಂದು ರಾಷ್ಟ್ರೀಯ ಸಾಕ್ಷರತಾ ದಿನ ಆಚರಿಸಲಾಗುತ್ತದೆ. ಶಿಕ್ಷಕರಾದ ನಾವು ಈ ಕಾರ್ಯದಲ್ಲಿ ಕೈ ಜೋಡಿಸಬಹುದಲ್ಲವೇ?

ಭಾರತದ ವಿಶಿಷ್ಟ ಪ್ರತಿಭೆ ಸರ್. ಎಂ ವಿಶ್ವೇಶ್ವರಾಯರು ಮೂಲತಃ ಎಂಜಿನಿಯರ್ ಆದಂತೆಯೇ ಸರ್.ಎಂ. ವಿ. ದಕ್ಷ ಆಡಳಿತಗಾರರು ಹಾಗೂ ಕಸದಲ್ಲೂ ರಸವನ್ನು ಕಾಣುವ ಅಪ್ರತಿಮ ಚೇತನ. ವಿಶ್ವೇಶ್ವರಾಯ ಎಂದ ಕೂಡಲೇ ನೆನಪಿಗೆ ಬರುವುದು ಕೆ.ಆರ್.ಎಸ್, ಮಂಡ್ಯ ಜಿಲ್ಲೆಯ ಜನರಂತೂ ಪ್ರತಿದಿನ ಸರ್.ಎಂ. ವಿಶ್ವೇಶ್ವರಾಯರನ್ನು ಸ್ಮರಿಸದೆ ಇರಲು ಸಾಧ್ಯವಿಲ್ಲ. ದಿವಾನರಾಗಿ ವಿಶ್ವೇಶ್ವರಾಯರು ಮಾಡಿದ ಆಡಳಿತದ ಸುಧಾರಣೆಗಳು ಜನರ ಮನಸ್ಸಿನಲ್ಲಿ ಮನೆ ಮಾಡಿದೆ. ಸರ್.ಎಂ ವಿಯ'ವರು ಅವರ ಕೆಲಸ ಕಾರ್ಯಗಳಲ್ಲಿ, ವೈಯುಕ್ತಿಕ ಜೀವನದಲ್ಲಿ ಪಾಲಿಸುತ್ತಿದ್ದ ಶಿಸ್ತು ಅನುಕರಣೀಯ. ವಿಶೇಷವಾಗಿ ಸರ್.ಎಂ.ವಿ ಯವರ ಸಮಯಪಾಲನೆ ಶಿಕ್ಷಕರಿಗೆ ಉತ್ತಮ ಆದರ್ಶವಾಗಿದ್ದು ಅವರ ಶಿಸ್ತನ್ನು ಪಾಲಿಸಲು ಪ್ರಯತ್ನಿಸೋಣ. ಅವರ ಹುಟ್ಟುಹಬ್ಬ ಸೆಪ್ಟೆಂಬರ್ 15 ಇಂಜಿನಿಯರ್ಸ್ ಡೇ ಎಂದು ಆದರಿಸುತ್ತೇವೆ.

ದೇವಕೀ ಪರಮಾನಂದನಾದ ಶ್ರೀ ಕೃಷ್ಣ ಜಗದ್ಗುರುವೂ ಹೌದು. ಶ್ರೀ ಕೃಷ್ಣ ದೇವಮಾನವರ, ಗೀತೋಪದೇಶದ ಮೂಲಕ ಮನುಷ್ಯರ ನಡವಳಿಕೆಗಳು ಹೇಗಿರಬೇಕು ಎಂಬುದನ್ನು ಬೋಧಿಸಿ ಉತ್ತಮ ಜೀವನದ ದಾರಿ ದೀಪ ತೋರಿಸಿದ್ದಾನೆ. ಆಗಸ್ಟ್ 25 ರಂದು ಶ್ರೀ ಕೃಷ್ಣಜನ್ಮಾಷ್ಟಮಿ ಈ ಆಚರಣೆಯಿಂದ ನಾವು ನೆಮ್ಮದಿಯ ಜೀವನ ನಡೆಸುವಂತಾಗಲಿ ಎಂದು ಆಶಿಸೋಣ.

ಸಂಪಾದಕರು

## ಸೂಕ್ತಿ



ಕುತೂಹಲ, ತನಿಖಾ ಮನೋಭಾವ, ಸೃಜನಶೀಲತೆ ಮುಂತಾದ ವಿಚಾರಣಾ ಗುಣವನ್ನು ಶಿಕ್ಷಣವು ವಿದ್ಯಾರ್ಥಿಗಳಲ್ಲಿ ಬೆಳೆಸುವಂತಿರಬೇಕು. ಶಿಕ್ಷಣದಿಂದ ವಿದ್ಯಾರ್ಥಿಗಳಲ್ಲಿ ಕಲ್ಪನಾಶಕ್ತಿ, ಕರಕುಶಲತೆ ಬೆಳೆಯಬೇಕು. ತಂತ್ರಜ್ಞಾನ ಮತ್ತು ವಿಜ್ಞಾನದ ಅಭ್ಯಾಸಕ್ಕೆ ವಿದ್ಯಾರ್ಥಿಗಳು ತಮ್ಮನ್ನು ತಾವು ಅರ್ಪಿಸುವುದನ್ನು ಹೇಳಿಕೊಡುವಂತಿರಬೇಕು ಶಿಕ್ಷಣ.

- ಡಾ॥ ಎಸ್. ರಾಧಾಕೃಷ್ಣನ್

## ಪರಿವಿಡಿ


- ಪ್ರಾಂತ ನೂತನ ಕಾರ್ಯಕಾರಿಣಿ 3
- ನಮಗೆ ಸ್ವಾತಂತ್ರ್ಯ ಸಿಕ್ಕಿದೆಯೇ ??? 5
- ಬೆಂಗಳೂರು ದಕ್ಷಿಣ ಜಿಲ್ಲೆಯ 31ನೇ ಪ್ರತಿಭಾ ಪುರಸ್ಕಾರ 6
- ಪ್ರತಿಭೆಯನ್ನು ದೇಶಕ್ಕೆ ಅರ್ಪಿಸಿ : ವಿದ್ಯಾರ್ಥಿಗಳಿಗೆ ಮಹೇಂದ್ರ ಮುನ್ನೋತ್ ಕರೆ 7
- ಆಧುನಿಕ ಶಿಕ್ಷಣ ದುರ್ಬಲ ಮನಸ್ಸಿನ ಮಕ್ಕಳನ್ನು ರೂಪಿಸುತ್ತಿದೆಯೇ? 8
- ಸದನದಲ್ಲಿ ಶಾಸಕ ಅರುಣ ಶಹಾಪೂರ್ 9
- ಸೋದರಿ ನಿವೇದಿತ –150 10
- ಪ್ರತಿಭಾ ಪುರಸ್ಕಾರ ಚಿತ್ರಗಳು 11
- ಅಭಿನಂದನೆ 12

# ಪ್ರಾಂತ ನೂತನ ಕಾರ್ಯಕಾರಿಣಿ

ದಿನಾಂಕ 31–7–2016 ರಂದು ಬೆಂಗಳೂರಿನಲ್ಲಿ ನಡೆದ ಸರ್ವಸದಸ್ಯರ ಸಭೆಯಲ್ಲಿ 2016–2018–19 ಅವಧಿಗೆ ಪ್ರಾಂತೀಯ ಕಾರ್ಯಕಾರಿಣಿಗೆ ಆಯ್ಕೆಯಾದ ಪದಾಧಿಕಾರಿಗಳು.

| | |
|---|---|
| ಅಧ್ಯಕ್ಷರು: | **ಶ್ರೀಯುತ ಶಿವಾನಂದ ಸಿಂಧನಕೇರಾ, ಮೈಸೂರು** |
| ಪ್ರಧಾನ ಕಾರ್ಯದರ್ಶಿ : | **ಶ್ರೀಯುತ ಚಿದಾನಂದ ಪಾಟೀಲ, ಕನಕಪುರ** |
| ಮಹಾ ಪೋಷಕರು: | **ಪ್ರೊ॥ ಕೃ. ನರಹರಿ, ಮಾಜಿ ಎಂ.ಎಲ್.ಸಿ** |
| ಪೋಷಕರು : | **ಶ್ರೀ ಹೆಚ್. ನಾಗಭೂಷಣ್ ರಾವ್** |
| ಮಾರ್ಗದರ್ಶಕರು : | **ಪ್ರೊ॥ ಕೆ. ಬಾಲಕೃಷ್ಣಭಟ್, ಮಾಜಿ ಎಂ.ಎಲ್.ಸಿ** |
| | **ಕ್ಯಾಪ್ಟನ್ ಗಣೇಶ್ ಕಾರ್ಣಿಕ್** ಎಂ.ಎಲ್.ಸಿ |
| | **ಶ್ರೀ ಅರುಣ್ ಶಹಾಪೂರ** ಎಂ.ಎಲ್.ಸಿ |
| ರಾಜ್ಯ ಸಹ ಪ್ರಧಾನ ಕಾರ್ಯದರ್ಶಿ : | **ಶ್ರೀ ಸಂದೀಪ್ ಬೂದಿಹಾಳ, ಹುಬ್ಬಳ್ಳಿ** |
| ರಾಜ್ಯ ಉಪಾಧ್ಯಕ್ಷರು : | **ಶ್ರೀ ಆರ್ ಕೊಟ್ರಪ್ಪ,** ಹಗರಿಬೊಮ್ಮನಹಳ್ಳಿ –**ಶ್ರೀ ಜಿ. ನಂಜುಂಡ ಸ್ವಾಮಿ,** ಮೈಸೂರು |
| | **ಶ್ರೀ ಬಿ.ಹೆಚ್ ವರದರಾಜು,** ಕನಕಪುರ– **ಶ್ರೀಮತಿ.ರೋಹಿಣಿ ದೇಶಪಾಂಡೆ,** ಬೆಳಗಾವಿ |
| ರಾಜ್ಯ ಕಾರ್ಯದರ್ಶಿಗಳು: | **ಶ್ರೀ ಬಿ.ಎಂ.ಎಸ್ ವೃಷಭೇಂದ್ರಸ್ವಾಮಿ,** ಚಿತ್ರದುರ್ಗ– **ಕುಮಾರಿ ಜಿ.ರೇಖಾ,** ನೆಲಮಂಗಲ |
| | **ಶ್ರೀ ಅರವಿಂದ ದೇಸಾಯಿ,** ಕೊಪ್ಪಳ – **ಶ್ರೀ ಜಿ.ಕೆ ತಳವಾರ,** ಬಾಗಲಕೋಟೆ |
| ರಾಜ್ಯ ಕಾರ್ಯಾಲಯ ಪ್ರಮುಖ್: | **ಶ್ರೀ ಜಿ.ಎಸ್ ಕೃಷ್ಣಮೂರ್ತಿ,** ಬೆಂಗಳೂರು |
| ರಾಜ್ಯಕೋಶಾಧ್ಯಕ್ಷ : | **ಶ್ರೀ ಜೆ.ಎಂ ಜೋಶಿ,** ಬೆಂಗಳೂರು |
| ರಾಜ್ಯ ಮಹಿಳಾ ಪ್ರಮುಖರು : | **ಶ್ರೀಮತಿ ಡಿ.ಕೆ ಮಮತಾ,** ರಾಮನಗರ |
| ಆಂತರಿಕ ಲೆಕ್ಕ ಪರಿಶೋಧಕರು : | **ಶ್ರೀ ಎಸ್. ನಾಗರಾಜ್,** ಬೆಂಗಳೂರು |
| ಶಿಕ್ಷಕ ಸಮಾಚಾರ ಸಹ ಸಂಪಾದಕರು: | **ಶ್ರೀ ಎನ್. ನಾಗರಾಜ್,** ಬೆಂಗಳೂರು |
| ಶೈಕ್ಷಣಿಕ ಪ್ರಕೋಷ್ಠ : | **ಶ್ರೀ ವಿ. ರಾಜ,** ಬೆಂಗಳೂರು |
| ಮಾಧ್ಯಮ ಪ್ರಕೋಷ್ಠ | **ಶ್ರೀ ಐ.ಕೆ ಪಾಟೀಲ**–ಕಲ್ಬುರ್ಗಿ, **ಶ್ರೀಮತಿ ವಿಜಯಲಕ್ಷ್ಮಿ**–ಕನಕಪುರ |
| | **ಶ್ರೀಮತಿ ರೇಣುಕಾ,** ಕನಕಪುರ |
| ರಾಜ್ಯ ಕಾರ್ಯಕಾರಿಣಿ ಸದಸ್ಯರು: | **ಶ್ರೀ ಶಾಂತಕುಮಾರ್ ಬಿರಾದಾರ್**–ಬೀದರ್, **ಶ್ರೀ ಶರಣು ಗೋಗೇರಿ**–ಗದಗ್, **ಶ್ರೀ ಬಸವರಾಜ್ ಹಳ್ಳಿ**–ವಿಜಯಪುರ, **ಶ್ರೀ ಸಿದ್ಧಲಿಂಗ ಸ್ವಾಮಿ**–ರಾಮನಗರ, **ಶ್ರೀಮತಿ ಮಾಲಿನಿ**–ಬೆಂಗಳೂರು, **ಶ್ರೀ ಹೆಚ್.** ಎ. **ಸರ್ವೇಶ್**–ನಂಜನಗೂಡು, **ಶ್ರೀ ಗುಂಡಾಚಾರ್**–ಬಳ್ಳಾರಿ |
| ವಿಭಾಗ ಪ್ರಮುಖರು : | **ಕಲ್ಬುರ್ಗಿ– ಶ್ರೀ ಮಹೇಶ ಬಸರಕೋಡ, ಶ್ರೀ ಗುಂಡಾಚಾರ್** |
| | **ಬೆಳಗಾವಿ – ಶ್ರೀ ಸಂತೋಷ ಹೊನ್ನಳ್ಳಿ, ಶ್ರೀ ಮುಕುಂದ ಗೋಖಲೆ, ಶ್ರೀ ಅಶೋಕ ಚಿಮ್ಮಲ** |
| | **ಮಂಗಳೂರು – ಶ್ರೀ ಹೆಚ್.ಡಿ. ಶಿವರಾಂ** |
| | **ತುಮಕೂರು–ಶ್ರೀ ಕೃಷ್ಣಮೂರ್ತಿ ಶ್ರೇಷ್ಠಿ, ಶ್ರೀ ಪಿ.ಆರ್.ಬಸವರಾಜ್, ಶ್ರೀ.ಬಿ.ಎನ್.ಎಂ ಸ್ವಾಮಿ** |
| | **ಬೆಂಗಳೂರು– ಶ್ರೀ ಗಂಗಾಧರ, ಶ್ರೀ ಸಿ. ಪುಟ್ಟಸ್ವಾಮಿ** |
| | **ಮೈಸೂರು – ಎಸ್. ನಂದೀಶ್** |
| ವಿಶೇಷ ಆಹ್ವಾನಿತರು : | **ಶ್ರೀ ಅಮರನಾಥ ಪಾಟೀಲ** ಎಂ.ಎಲ್.ಸಿ, ಕಲ್ಬುರ್ಗಿ |
| | **ಪ್ರೊ॥ ಎಸ್. ವಿ. ಸಂಕನೂರು** ಎಂ.ಎಲ್.ಸಿ, ಗದಗ್ |
| | **ಶ್ರೀ ಹಣಮಂತ ನಿರಾಣಿ** ಎಂ.ಎಲ್.ಸಿ, ಬಾಗಲಕೋಟೆ |
| | **ಶ್ರೀ ರಾಮ ಚಂದ್ರಗೌಡ,** ಎಂ.ಎಲ್.ಸಿ , ಬೆಂಗಳೂರು |
| | **ಡಾ॥ ರಘು ಅಕಮಂಚಿ**–ಹುಬ್ಬಳ್ಳಿ, **ಡಾ॥ ಜಯಕರ ಶೆಟ್ಟಿ**–ಬೆಂಗಳೂರು |

ಬೆಳಗಾವಿ ವಿಭಾಗ ಶಿಕ್ಷಣ ಪ್ರಕೋಷ್ಠ ಪ್ರಮುಖ್ : **ದಯಾನಂದ ಶಿಕ್ಕೇರಿ, ಬಾಗಲಕೋಟೆ**

**ಪುಟ 4 ಕ್ಕೆ ➤**

➢ ಪುಟ 3 ರಿಂದ..... ಕಾರ್ಯಕಾರಿಣಿ

31-07-2016 ರಂದು ಬೆಂಗಳೂರಿನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾ ಅವರು ಕಳೆದ ವರ್ಷದಲ್ಲಿ ಸಂಘವು ನಡೆಸಿದ ಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದರು. ನಂತರ ಜಿಲ್ಲಾ ಘಟಕಗಳು ಕಳೆದ ವರ್ಷದಲ್ಲಿ ನಡೆಸಿದ ಕಾರ್ಯಕ್ರಮಗಳ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

ಶಿಕ್ಷಕ ಸಂಘವು 2016-17 ನೇ ಸಾಲಿಗಾಗಿ ಯೋಜಿಸಿರುವ ಕಾರ್ಯಕ್ರಮಗಳ ವಿವರವನ್ನು ನೀಡಲಾಯಿತು. ಈ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲಾ ಘಟಕಗಳೂ ನಡೆಸುವಂತೆ ಸೂಚನೆ ನೀಡಲಾಯಿತು. ಪ್ರತಿ ಜಿಲ್ಲೆಯಲ್ಲಿಯೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಶೀಘ್ರವಾಗಿ ನಡೆಸುವಂತೆ, ಜಿಲ್ಲೆಗಳಲ್ಲಿ ಗುರುವಂದನಾ ಕಾರ್ಯಕ್ರಮವನ್ನು ನಡೆಸಲು ತಿಳಿಸಲಾಯಿತು. ಆಗಸ್ಟ್ 15 ನೇ ತಾರೀಖಿನಿಂದ ಆಗಸ್ಟ್ 30ನೇ ತಾರೀಖಿನವರೆಗೆ ಸದಸ್ಯತಾ ಅಭಿಯಾನವನ್ನು ಎಲ್ಲಾ ಜಿಲ್ಲೆಗಳೂ ಕೈಗೊಳ್ಳಬೇಕು. ಪದಾಧಿಕಾರಿಗಳಿಂದ ಆಜೀವ ಸದಸ್ಯತ್ವನ್ನು ಮಾಡಿಸುವಂತೆ ನಿರ್ಧರಿಸಲಾಯಿತು. ಆಜೀವ ಸದಸ್ಯತಾ ಶುಲ್ಕ ರೂ. 500/- ಇತರರಿಂದ ವಾರ್ಷಿಕ ಸದಸ್ಯತ್ವ ಮಾಡಿಸಬೇಕು. ವಾರ್ಷಿಕ ಸದಸ್ಯತಾ ರೂ. 100/- ಸದಸ್ಯತಾ ಶುಲ್ಕದ ಜೊತೆಗೆ ಶಿಕ್ಷಕ ಸಮಾಚಾರದ ವಾರ್ಷಿಕ ಚಂದ ರೂ. 100/- ನ್ನು ಸದಸ್ಯರಿಂದ ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು. ಸೆಪ್ಟೆಂಬರ್ ತಿಂಗಳಿನಲ್ಲಿ ಅಂಬೇಡ್ಕರ್ ಮತ್ತು ಶಿಕ್ಷಣದ ವಿಷಯವಾಗಿ ಹಾಗೂ ಶಾಶ್ವತ ಜೀವನ ಮೌಲ್ಯಗಳು ವಿಷಯದ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸಬೇಕು. ಅಕ್ಟೋಬರ್ ಮಾಹೆಯಲ್ಲಿ ಒಂದು ಅಥವಾ ಎರಡು ದಿನಗಳ ಅಭ್ಯಾಸ ವರ್ಗವನ್ನು ಆಯೋಜಿಸಬೇಕೆಂದು ನಿರ್ಧರಿಸಲಾಯಿತು. ನವೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ವಿಷಯವಾರು ಮಾಹಿತಿ ಹಂಚಿಕೆಯ ಕಾರ್ಯಕ್ರಮ ನಡೆಸಬೇಕೆಂದು ತಿಳಿಸಲಾಯಿತು.

ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12 ರಿಂದ ನೇತಾಜಿ ಸುಭಾಷ್ ಚಂದ್ರಬೋಸರ ಜನ್ಮ ದಿನ ಜನವರಿ 23 ರ ಅವಧಿಯಲ್ಲಿ ಸಂಕಲ್ಪದಿನಾಚರಣೆಯನ್ನು ಆಚರಿಸುವಂತೆ ಸೂಚಿಸಲಾಯಿತು. ಮಾರ್ಚ್ 29 ರಂದು ಯುಗಾದಿ ಹಬ್ಬ. ಅಂದು ಹೊಸ ವರ್ಷವಾಗಿ ಆಚರಿಸುವಂತೆ, ಅಂದು ಎಲ್ಲರಿಗೂ ಶುಭಾಶಯ ಪತ್ರಗಳನ್ನು ಕಳುಹಿಸಿ ಯುಗಾದಿಯ ಮಹತ್ವವನ್ನು ತಿಳಿಸುವಂತೆ ಕೋರಲಾಯಿತು. ಈ ಕಾರ್ಯಕ್ರಮಗಳೊಂದಿಗೆ ಮಹಿಳಾ ಶಿಕ್ಷಕಿಯರ ಸಮಾವೇಶವನ್ನು ಎಲ್ಲಾ ಜಿಲ್ಲೆಗಳಲ್ಲೂ ನಡೆಸುವಂತೆ ಸಲಹೆ ನೀಡಲಾಯಿತು.

ಮಾಧ್ಯಮಿಕ ಶಿಕ್ಷಕ ಸಂಘದ ಸಹಕಾರ್ಯದರ್ಶಿಗಳಾದ ಚಿದಾನಂದ ಪಾಟೀಲರು ಮಾತನಾಡಿ ಶಿಕ್ಷಕರ, ಶಿಕ್ಷಣದ ಪ್ರಮುಖ ಸಮಸ್ಯೆಗಳ ಬಗ್ಗೆ ರಾಜ್ಯಾದ್ಯಂತ ವಿವಿಧ ಹಂತಗಳಲ್ಲಿ ಚಳುವಳಿಯನ್ನು ಪ್ರಾರಂಭಿಸುವಂತೆ ಹೇಳಿದರು. ಈ ಚಳುವಳಿಯಲ್ಲಿ ಎಲ್ಲಾ ಶಿಕ್ಷಕರು ಶಿಕ್ಷಣ ಸಚಿವರಿಗೆ ಪತ್ರವನ್ನು ಬರೆದು ರವಾನಿಸುವಂತೆ ಕ್ರಮಕೈಗೊಳ್ಳಬೇಕು. ಈ ಕಾರ್ಯಕ್ರಮ ಸೆಪ್ಟೆಂಬರ್ ತಿಂಗಳಲ್ಲಿ ನಡೆಯಬೇಕೆಂದು ಮಾಹಿತಿ ನೀಡಲಾಯಿತು.

ಶಿಕ್ಷಕ ಸಂಘದ ಕಾರ್ಯಾಧ್ಯಕ್ಷರೂ ಹಾಗೂ ವಿಧಾನ ಪರಿಷತ್ ಸದಸ್ಯರೂ ಆದ ಶ್ರೀ ಅರುಣ ಶಹಾಪೂರರು ಮಾತನಾಡಿ ಶಿಕ್ಷಕರ ದೀರ್ಘಕಾಲದ ಸಮಸ್ಯೆಗಳು ಹಾಗೂ ಇಂದಿನ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಎಳೆ ಎಳೆಯಾಗಿ ವಿವರ ನೀಡಿದರು. ಕೇಂದ್ರ ಸರ್ಕಾರ ರೂಪಿಸುತ್ತಿರುವ ಹೊಸ ಶೈಕ್ಷಣಿಕ ನೀತಿಯ ಬಗ್ಗೆ ವಿಚಾರಗಳನ್ನು ಸಭೆಗೆ ತಿಳಿಸಿದರು. ಈ ವಿಷಯವಾಗಿ ನಡೆಯುತ್ತಿರುವ ಚರ್ಚೆ, ಶಿಕ್ಷಕರು ಹಾಗೂ ಸಾರ್ವಜನಿಕರಲ್ಲಿ ಶಿಕ್ಷಣದಲ್ಲಿ ಮುಂದೇನಾಗಬಹುದು ಎಂಬ ಭೀತಿ, ಸರ್ಕಾರ, ಶಿಕ್ಷಕರ ಮಧ್ಯೆ ಇರುವ ಗೊಂದಲಗಳನ್ನು ಹಾಗೂ ವಾಸ್ತವ ಸಂಗತಿಗಳನ್ನು ಶ್ರೀ ಅರುಣ ಶಹಾಪೂರರು ಎಳೆ ಎಳೆಯಾಗಿ ವಿವರಿಸಿದರು. ಮುಂದಿನ ದಿನಗಳಲ್ಲಿ ಎಲ್ಲರೂ ಸಂಘಟನಾತ್ಮಕವಾಗಿ ಹೋರಾಡಿ, ಉತ್ತಮ ಶಿಕ್ಷಣ ವ್ಯವಸ್ಥೆಗಾಗಿ ಕೈ ಜೋಡಿಸೋಣ ಎನ್ನುವ ಆಶಯವನ್ನು ವ್ಯಕ್ತಪಡಿಸಿದರು.

ಡಿಸೆಂಬರ್ 2016ರಲ್ಲಿ ನಡೆಯುವ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಶ್ರೀ ಪಿ.ಆರ್ ಬಸವರಾಜ್‌ರವರ ಹೆಸರನ್ನು ಸೂಚಿಸಿರುವ ಬಗ್ಗೆ ಶ್ರೀ ಶಿವಾನಂದ ಸಿಂಧನಕೇರ ಸಭೆಗೆ ತಿಳಿಸಿದರು. ಸಭೆಯು ಸರ್ವಾನುಮತದಿಂದ ಪಿ. ಆರ್ ಬಸವರಾಜರವರ ಆಯ್ಕೆಯನ್ನು ಅನುಮೋದಿಸಿತು. ಶ್ರೀಯುತ ಬಸವರಾಜ್‌ರವರ ಗೆಲುವಿಗಾಗಿ ಎಲ್ಲರೂ ಶ್ರಮಿಸಲು ಸಭೆ ನಿರ್ಣಯಿಸಿತು.

ಶಿಕ್ಷಕ ಸಂಘದ ಪೋಷಕರಾದ ಶ್ರೀಯುತ ಹೆಚ್. ನಾಗಭೂಷಣರಾವ್ ನೂತನ ಕಾರ್ಯಕಾರಿಣಿಗೆ ಶುಭ ಹಾರೈಸಿ, ಹೆಚ್ಚಿನ ಹೊಣೆಗಾರಿಕೆಯಿಂದ ಸಂಘದ ಬೆಳವಣಿಗೆಗೆ ಶ್ರಮಿಸುವಂತೆ ಕರೆ ನೀಡಿದರು.

●

**ಸ್ವಾತಂತ್ರ್ಯವೆಂದರೆ ಕೇವಲ ಸಂಕೋಲೆಯನ್ನು ಕಿತ್ತು ಹಾಕುವುದಲ್ಲ ; ಇತರರ ಸ್ವಾತಂತ್ರ್ಯ ಹಾಗೂ ಗೌರವವನ್ನು ವೃದ್ಧಿಗೊಳಿಸುವಂತೆ ಜೀವಿಸುವುದೇ ಸ್ವಾತಂತ್ರ್ಯ. – ನೆಲ್ಸನ್ ಮಂಡೇಲಾ**

**ಅಜ್ಞಾನವು ದೇವರ ಶಾಪ ; ಜ್ಞಾನವು ಸ್ವರ್ಗದ ಕಡೆಗೆ ಹಾರಬಹುದಾದ ರೆಕ್ಕೆ.**




2016ರ ಆಗಸ್ಟ್ 15 ರಂದು, 70 ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಿರುವ ನಮ್ಮ ಹೃದಯದಲ್ಲಿ, ಇಂತಹದ್ದೊಂದು ಪ್ರಶ್ನೆ ಎದ್ದಿದ್ದರೆ, ಅದು ಅಸಹಜವೇನಲ್ಲ. ಪ್ರಚಲಿತ ವಿದ್ಯಮಾನಗಳ ಅವಲೋಕನದಿಂದ, ಸಮಸ್ಯೆಗಳ ತಾಂಡವದಿಂದ, ಈ ಪ್ರಶ್ನೆ ನಿರುತ್ತರವಾಗಿಯೇ ಉಳಿದಿದೆ. ಏಕೆಂದರೆ, ವಾಸ್ತವಿಕವಾಗಿ ಒಂದು ಪೂರ್ಣ-ಸ್ವರಾಜ್ಯ ಹೊಂದಿದ ದೇಶ ಯಾವ ಶೀವಿ-ನಿರಾತಂಕತೆಯಿಂದ ಬೀಗಬೇಕೋ, ಆ ಛಾಪು ಇನ್ನೂ ಪರಿಪಕ್ವವಾಗಿ ಭಾರತದಲ್ಲಿ ಮೂಡಿಯೇ ಇಲ್ಲ.

ಮೊದಲನೆಯದಾಗಿ, ಒಂದು ಸ್ವತಂತ್ರದೇಶದಲ್ಲಿ ಎಲ್ಲರಿಗೂ ಒಂದೇ ಸಾಂವಿಧಾನಿಕ ನಿಯಮಗಳಿರಬೇಕು. ಆಗಲೇ, ಪರಸ್ಪರರ ಅಪಸ್ವರ ಕಡಿಮೆಯಾಗಲು ಸಾಧ್ಯ. ಆದರೆ, ಅಂತಹ ಸಮಾನ ನಾಗರಿಕ ಸಂಹಿತೆಯೇ ಈ ದೇಶದಲ್ಲಿಲ್ಲ. ಅವರವರ ಧರ್ಮಕ್ಕೆ ತಕ್ಕಂತೆಯೇ ನಡೆದುಕೊಳ್ಳುತ್ತ ಹೋದರೆ, ಸಂವಿಧಾನದ ಸಮಾನತೆಯ ಸಾರ ಎಲ್ಲಿಂದ ಬಂದೀತು.?

ಇನ್ನು, ಒಂದು ಒಕ್ಕೂಟದ ಎಲ್ಲ ಭಾಗಗಳೂ, ಆ ರಾಷ್ಟ್ರದ ನಾಡಿಮಿಡಿತದಲ್ಲಿ ಒಂದಾಗಿರಬೇಕು. ಅಂದಾಗಲೇ ಗೌರವ ಭಾವನೆ, ನಮ್ಮವರು, ನಮ್ಮದು ಎಂಬ ಮನೋಭಾವ ಬೆಳೆಯಲು ಸಾಧ್ಯ. ಆದರೆ ಆಗಿರುವುದೇನು ? ಉಳಿದೆಲ್ಲ ರಾಜ್ಯಗಳೇ ಒಂದು, ಭಾರತದ ಮುಕುಟವಾದ ಕಾಶ್ಮೀರವೇ ಒಂದು. ಸ್ವಾತಂತ್ರ್ಯದ ಹೊಸತರಲ್ಲೇ ಆ ಸಮಸ್ಯೆಯನ್ನು ಇಲ್ಲವಾಗಿಸಬಹುದಿತ್ತು. ಆದರೆ, ರಾಜಕೀಯ ಡೋಲಾಯಮಾನ ಸ್ಥಿತಿಯಿಂದ, ಇಂದು ಪೆಡಂಭೂತವಾಗಿ ಬೆಳೆದು, ಉಳಿದವರ ನೆಮ್ಮದಿಯನ್ನೂ ಹಾಳು ಮಾಡಿದೆ. ನಮ್ಮ ಮನೆಯವರಿಗೇ ಹೆದರಿ, ಕುಳಿತುಕೊಳ್ಳುವುದು ಸ್ವಾತಂತ್ರದ ಲಕ್ಷಣವೇ ??

ರಾಷ್ಟ್ರ ನಿರ್ಮಾಣದ ಅಡಿಪಾಯವಾದ ಶಿಕ್ಷಣ ಕ್ಷೇತ್ರವೂ ಕೂಡ ಅಸಮಂಜಸ ವಾಗಿಯೇ ಬೆಳೆದಿದೆ. ಎಲ್ಲ ರಾಷ್ಟ್ರಗಳಲ್ಲೂ ಶಿಕ್ಷಣವು ಮಾತೃ ಭಾಷೆಯಲ್ಲೇ ದೊರೆಯುತ್ತದೆ. ಮಾತೃ ಭಾಷೆಯಲ್ಲಿನ ಪ್ರಾಥಮಿಕ ಶಿಕ್ಷಣ ವ್ಯಕ್ತಿಯ ಗ್ರಹಾಂ ಶಕ್ತಿ ಮತ್ತು ಚಿಂತನ ಶಕ್ತಿಯನ್ನು ವೃದ್ಧಿಗೊಳಿಸುತ್ತದೆ ಎಂಬುದು ತಜ್ಞರ ಅಭಿಪ್ರಾಯ.


ಆದರೆ ನಮ್ಮ ದೇಶದಲ್ಲಿ, ಆಯಾ ಪ್ರಾಂತದ ಮಾತೃಭಾಷೆಗಳಲ್ಲಿ ಶಿಕ್ಷಣಕ್ಕಿಂತ, ಆಂಗ್ಲಭಾಷೆಯಲ್ಲಿ ಎಲ್ಲ ಹಂತದ ಅಧ್ಯಯನವೂ ನಡೆಯುತ್ತಿದೆ. ಇದು ಏನನ್ನು ಸೂಚಿಸುತ್ತದೆ ? ಒಂದು ಭವ್ಯವಾದ ರಾಷ್ಟ್ರಕ್ಕೆ, ತನ್ನದೇ ಭಾಷೆಯಲ್ಲಿ ಶಿಕ್ಷಣ ಕೊಡುವ ಯೋಗ್ಯತೆಯೂ ಇಲ್ಲ ಅಂತಲ್ಲವೇ ? ಇದು ಒಂದೆಡೆಯಾದರೆ, ಓದುವ ಪಠ್ಯವಂತೂ, ಯಾರು ಯಾರೋ ಬರೆದ ಇತಿಹಾಸದ ಗಿಳಿಪಾಠಗಳಾಗಿವೆ.

ಈ ಕಾರಣಗಳು, ಅಷ್ಟೇನೂ ಮಹತ್ವದ್ದಲ್ಲ ಎಂದೆನಿಸಿದರೂ, ಇವನ್ನು ಬೆಳೆಯಲು ಬಿಟ್ಟರೆ ಮುಂದೆ ಆಗುವ ಅನಾಹುತ ಬಹಳ ದೊಡ್ಡದಿವೆ. ರಾಷ್ಟ್ರ ಇಬ್ಭಾಗವಾಗಿ ಹೋದ ಕಹಿ ನೆನಪು, ಪ್ರತಿ ಬಾರಿಯ ಸ್ವಾತಂತ್ರೋತ್ಸವದಲ್ಲೂ ಮರುಕಳಿಸುತ್ತದೆ. ಅಂತಹ ನೆನಪುಗಳು ಮತ್ತೆ ಉದ್ಭವವಾಗಬಾರದೆಂದರೆ, ಸ್ವಾತಂತ್ರ್ಯದ ಮೂಲಧ್ಯೇಯಗಳನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ನಮ್ಮ ಮಗ್ಗುಲಲ್ಲೇ ಕೆಂಡವನ್ನಿಟ್ಟು ಕೊಂಡಿರುವುದಕ್ಕಿಂತಾ, ಅದನ್ನು ಆದಷ್ಟು ಬೇಗ ನಂದಿಸುವುದು ಜಾಣತನದ ನಡೆ.

ಈ ಸ್ವಾತಂತ್ರ್ಯ ದಿನದಂದು, ನಮ್ಮ ಹೋರಾಟಗಾರರು ಕನಸು ಕಂಡಿದ್ದ ದಿವ್ಯ ಭಾರತದ ನಿರ್ಮಾಣಕ್ಕೆ ಒಟ್ಟುಗೂಡಿ ಸಂಕಲ್ಪಿಸೋಣ..

ವಂದೇ ಮಾತರಂ..

**ಭೀಮಸೇನ್ ಪುರೋಹಿತ್**
**B.E. MTech**
**ಇಂಜಿನಿಯರ್**
**ಬೆಂಗಳೂರು**



# ಬೆಂಗಳೂರು ದಕ್ಷಿಣ ಜಿಲ್ಲೆಯ 31ನೇ ಪ್ರತಿಭಾ ಪುರಸ್ಕಾರ

"ಒಂದು ಸಾಮಾನ್ಯವಾದ ಕಲ್ಲನ್ನು ಅತ್ಯುತ್ತಮವಾದ ಶಿಲ್ಪಿ ಸುಂದರವಾದ ಮೂರ್ತಿಯನ್ನಾಗಿ ಕೆತ್ತಬಲ್ಲ. ಹಾಗೆಯೇ ಸಾಧಾರಣವಾದ ವಿದ್ಯಾರ್ಥಿಗಳಿಗೆ ವಿದ್ಯೆಯನ್ನು ಧಾರೆಯೆರೆದು ಅಸಾಧಾರಣ ವ್ಯಕ್ತಿಯನ್ನಾಗಿಸಿ, ಅತ್ಯುನ್ನತವಾದ ಸ್ಥಾನಕ್ಕೆ ಏರಿಸಬಲ್ಲ ಶಕ್ತಿ ನಮ್ಮ ಶಿಕ್ಷಕರಿಗಿರುತ್ತದೆ. ಅಂಥ ಶಿಕ್ಷಕರಿಗಾಗಿಯೇ ಶಿಕ್ಷಕ ಸಂಘದ 31ನೆಯ ಪ್ರತಿಭಾಪುರಸ್ಕಾರ ಸಮಾರಂಭದಲ್ಲಿ ಪಾಲ್ಗೊಂಡು ನನಗೆ ತುಂಬ ಸಂತೋಷವಾಗಿದೆ" ಎಂದು ಪ್ರೊ॥ ಎನ್.ವಿ ರಘುರಾಮ್ ಅವರು ವಿದ್ಯಾರ್ಥಿಗಳನ್ನು ಮತ್ತು ಅವರ ಪೋಷಕರನ್ನು ಕುರಿತು ಮಾತನಾಡುತ್ತಾ ತಿಳಿಸಿದರು.

ಬೆಂಗಳೂರಿನ ಜಯನಗರದ ಆರ್.ವಿ ಟೀಚರ್ಸ್ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ '31ನೆಯ ಪ್ರತಿಭಾ ಪುರಸ್ಕಾರ'ವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಗೌರವ ಅತಿಥಿಗಳಾಗಿ ಉಪಸ್ಥಿತರಿದ್ದು ಮಕ್ಕಳಿಗೆ ಮಾರ್ಗದರ್ಶನ ಮಾಡಿದರು. ಪ್ರೊ॥ ಎನ್.ವಿ ರಘುರಾಮ್ ಅವರು ಯೋಗ ವಿಶ್ವವಿದ್ಯಾಲಯ 'ವ್ಯಾಸ ಇಂಟರ್‌ನ್ಯಾಷನಲ್ ಸಂಸ್ಥೆಯ' ನಿರ್ದೇಶಕರಾಗಿದ್ದಾರೆ. ಅಮೇರಿಕಾದ 'ಯೋಗಭಾರತಿ' ಯ ಚೇರ್ಮನ್ ಆಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಪ್ರಪಂಚದ 50ಕಿಂತ ಹೆಚ್ಚು ದೇಶಗಳಲ್ಲಿ ಭಾರತೀಯ ತತ್ತ್ವಶಾಸ್ತ್ರ, ಆಧ್ಯಾತ್ಮ ಹಾಗೂ ಯೋಗವನ್ನು ಪ್ರಚಾರ ಮಾಡುತ್ತಿದ್ದಾರೆ. ಕಾರ್ಯಕ್ರಮ, ಕಾರ್ಯಾಗಾರಗಳನ್ನು ನಡೆಸುತ್ತಿದ್ದಾರೆ. ಯೋಗಶ್ರೀ ಪ್ರೊ॥ ಎನ್.ವಿ ರಘುರಾಮ ಅವರು ಮಾತನಾಡುತ್ತಾ ಕಲಿಕೆಯ ಬಗ್ಗೆ ತಿಳಿಸಿದರು. ಶ್ರೀ ರಾಮಕೃಷ್ಣ ಪರಮಹಂಸರೇ 'ನಾನು ಬದುಕಿರುವವರೆಗೆ ಕಲಿಯುತ್ತೇನೆ'. ಎಂದು ಹೇಳಿದ್ದಾರೆ. ಇನ್ನು ಸಾಮಾನ್ಯವಾದ ನಾವು ಕಲಿಯುವುದಕ್ಕೆ ಕೊನೆಯುಂಟೆ? ಎಂದು ಪ್ರಶ್ನಿಸಿದರು. ನಿವೇದಿತಾ, ವಿವೇಕಾನಂದ, ಅಂಬೇಡ್ಕರರನ್ನು ಶತಮಾನಗಳ ನಂತರವೂ ನಾವು ನೆನಪಿಸಿಕೊಳ್ಳುತ್ತೇವೆ. ಏಕೆಂದರೆ ಅವರು ಸಮಾಜ, ದೇಶಕ್ಕಾಗಿ ಬದುಕಿದವರು. ಸೃಷ್ಟಿಯು ಸರ್ವಸ್ವವನ್ನು ನೀಡಿದರೂ ಏನನ್ನೂ ನಿರೀಕ್ಷಿಸುವುದಿಲ್ಲ. ಆದರೆ ಮಾನವ ಸ್ವಾರ್ಥಿಯಾಗುತ್ತಿದ್ದಾರೆ. 'ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ' ಎಂಬ ಮಾತಿನಂತೆ ಪಡೆದದ್ದಕಿಂತ ಹೆಚ್ಚು ಕೊಡುವ ಅಭ್ಯಾಸವನ್ನು ಬೆಳೆಸಿಕೊಳ್ಳೋಣ. ಭಾರತದ ಸಂಸ್ಕೃತಿ– ಪರಂಪರೆಗಳು ಜಗತ್ತಿನ ಎಲ್ಲ ಜನರನ್ನು ಆಕರ್ಷಿಸುತ್ತಿವೆ. ನಾವು ಅವುಗಳ ಬಗ್ಗೆ ಅಭಿಮಾನವನ್ನು ಹೊಂದಿ ಸ್ವಾಭಿಮಾನದಿಂದ ಬದುಕೋಣ ಎಂದು ಕರೆನೀಡಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲೆಯ 31ನೆಯ ಪ್ರತಿಭಾ ಪುರಸ್ಕಾರದಲ್ಲಿ 300 ಶಿಕ್ಷಕರ ಮಕ್ಕಳೂ ಸೇರಿದ್ದರು. ಅವರಿಗೆ ಸುಂದರವಾದ ಸ್ಮರಣಫಲಕ, ಪ್ರಶಸ್ತಿಪತ್ರ, ಮೌಲ್ಯಯುತವಾದ ಪುಸ್ತಕಗಳನ್ನು ವಿತರಿಸಲಾಯಿತು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಜ್ಯಾಧ್ಯಕ್ಷರಾಗಿರುವ ಶ್ರೀ ಶಿವಾನಂದ ಸಿಂಧನಕೇರ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಮಾತನಾಡುತ್ತಾ ಶಿಕ್ಷಕ ಸಂಘದ ಉದ್ದೇಶಗಳು, ಸಂಘದ ಸಾಧನೆಗಳ ಕುರಿತು ತಿಳಿಸಿದರು. ಸ್ವಾಮಿ ವಿವೇಕಾನಂದರು, ಶಿವಾಜಿ, ವೀರಸಾವರ್ಕರ್, ಮದನ್ ಮೋಹನ ಮಾಲವೀಯ ಮುಂತಾದ ಸಮೃದ್ಧ ಭಾರತದ ಸುಪುತ್ರರ ಸೇವಾಮನೋಭಾವದ ಬಗ್ಗೆ ತಿಳಿಸಿದರು.

ಶಿಕ್ಷಕ ಸಂಘದ ಪೋಷಕರಾಗಿರುವ ಶ್ರೀ ಹೆಚ್. ನಾಗಭೂಷಣರಾವ್ ಅವರು ಪ್ರತಿಭಾಪುರಸ್ಕಾರದ ವಿಶೇಷತೆ, ಮಹತ್ವದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಘದ ಮಹಾಪೋಷಕರು ಎಲ್ಲ ಮಕ್ಕಳಿಗೆ ಪ್ರತಿಜ್ಞೆಯನ್ನು ಬೋಧಿಸಿ ಆಶೀರ್ವಾದ ಮಾಡಿದರು. ಶಿಕ್ಷಕ ಸಂಘದ ಅಖಿಲಭಾರತ ಮಹಿಳಾ ಪ್ರಮುಖರಾಗಿರುವ ಶ್ರೀಮತಿ ಆರ್. ಸೀತಾಲಕ್ಷ್ಮಿಯವರು ಎಲ್ಲ ದಾನಿಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಶಿಕ್ಷಕ ಸಂಘದ ಬೆಂಗಳೂರು ದಕ್ಷಿಣ ಜಿಲ್ಲೆಯ ಅಧ್ಯಕ್ಷರಾಗಿರುವ ಶ್ರೀ.ವಿ. ರಾಜು ಅವರು ಮುಖ್ಯ ಅತಿಥಿಗಳನ್ನು ಸಭೆಗೆ ಪರಿಚಯಿಸಿ ಸರ್ವರನ್ನು ಸ್ವಾಗತಿಸಿದರು. ಜಿಲ್ಲೆಯ ಪ್ರಧಾನ ಕಾರ್ಯದರ್ಶಿಗಳಾಗಿರುವ ಶ್ರೀ ಬಿ.ಎ. ಸುರೇಂದ್ರ ಅವರು ವಂದನಾರ್ಪಣೆಯನ್ನು ನಡೆಸಿಕೊಟ್ಟರು. ಜಿಲ್ಲೆಯ ಖಜಾಂಚಿ ಯಾಗಿರುವ ಶ್ರೀಮತಿ ಜಿ.ಎನ್. ವಾಸುಕಿಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಚಿ॥ ಅನಂತ್ ಪ್ರಾರ್ಥನೆ ಮಾಡಿದರು. ಕು॥ ಸಿರಿ ವಂದೇಮಾತರಂ ಹಾಡಿದಳು. ಶಿಕ್ಷಕ ಸಂಘದ ರಾಜ್ಯ ಖಜಾಂಚಿಗಳಾಗಿರುವ ಶ್ರೀ ಜೆ.ಎಂ. ಜೋಶಿಯವರು, ರಾಜ್ಯದ, ಬೆಂಗಳೂರು ಉತ್ತರ ಜಿಲ್ಲೆಯ ಹಲವು ಪದಾಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಶಾಲಾ ಪ್ರಥಮಿಗರು, ದಿವ್ಯಾಂಗರು, ಶಿಕ್ಷಕರು, ಮುಖ್ಯಶಿಕ್ಷಕರು, ಹಿತೈಷಿಗಳು, ದಾನಿಗಳು ಪೋಷಕರಿಂದ ಸಭೆಯು ತುಂಬಿ ತುಳುಕುತ್ತಿತ್ತು.

ಸ್ವಾಮಿ ವಿವೇಕಾನಂದ ಶಿಷ್ಯರಲ್ಲಿ ಒಬ್ಬರಾಗಿರುವ ಸೋದರಿ ನಿವೇದಿತಾ ಅವರು ಜನಿಸಿ 150 ವರ್ಷಗಳಾಗಿರುವುದರಿಂದ ಈ ಸಮಾರಂಭವನ್ನು ಸೋದರಿ ನಿವೇದಿತಾ ಅವರಿಗೆ ಅರ್ಪಿಸಲಾಯಿತು.



**ವಿ. ರಾಜ**
**ಅಧ್ಯಕ್ಷರು, ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**
**ಬೆಂಗಳೂರು ದಕ್ಷಿಣ ಜಿಲ್ಲೆ**

# ಪ್ರತಿಭೆಯನ್ನು ದೇಶಕ್ಕೆ ಅರ್ಪಿಸಿ : ವಿದ್ಯಾರ್ಥಿಗಳಿಗೆ ಮಹೇಂದ್ರ ಮುನ್ನಾತ್ ಕರೆ

ನನ್ನ ಭಾರತ, ನಿಮ್ಮ ಭಾರತ ಸುಭಾಷ್ ಚಂದ್ರರ ಭಾರತ, ವಾಜಪೇಯಿ ಭಾರತ, ಭಗತ್ ಸಿಂಗ್‌ರ ಭಾರತ, ಅಬ್ದುಲ್ ಕಲಾಂರ ಭಾರತ. ಇಂತಹ ಶ್ರೇಷ್ಠ ಭಾರತದ ಮಣ್ಣನ್ನು ಪೂಜಿಸಿ, ಧರ್ಮವನ್ನು ಪ್ರೀತಿಸಿ, ನಮ್ಮ ಮನೆ, ನಮ್ಮ ಬೀದಿಯನ್ನು ಸ್ವಚ್ಛವಾಗಿಟ್ಟರೆ ಇಡೀ ಭಾರತವೇ ಸ್ವಚ್ಛ ಭಾರತವಾಗುತ್ತದೆ, ಎಲ್ಲವನ್ನೂ ಸರ್ಕಾರದಿಂದಲೇ ಅಪೇಕ್ಷಿಸಬೇಡಿ ಎಂದು ಮಾರುತಿ ಮೆಡಿಕಲ್ಸ್‌ನ ಶ್ರೀ ಮಹೇಂದ್ರ ಮುನ್ನಾತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಮುಂದುವರೆದು ಅವರು ತಾಯಿ ಹಾಲು ಇರೋತನಕ, ಹಸುವಿನ ಹಾಲು ಕೊನೆತನಕ ಎಂದು ಹೇಳುವುದರ ಮೂಲಕ ಗೋವಿನ ಮಹತ್ವವನ್ನು ತಿಳಿಸಿದರು. ನಮ್ಮಲ್ಲಿರುವ ಪ್ರತಿಭೆಯನ್ನು ದೇಶಕ್ಕೆ ಅರ್ಪಿಸುವಂತೆ ಯುವಪೀಳಿಗೆಗೆ ಮಹೇಂದ್ರ ಮುನ್ನಾತ್ ಕಿವಿ ಮಾತು ಹೇಳಿದರು. ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಎಲ್ಲರೂ ಒಂದೇ. ಅದೇ ಮನುಷ್ಯ ಜಾತಿ ಎಂಬುದರ ಮೂಲಕ ಭಾವೈಕ್ಯದ ಭಾವನೆಯನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತಿದರು. ಶ್ರೀ ಮಹೇಂದ್ರ ಮುನ್ನಾತ್ ತಾರೀಖು 24-7-2016 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯು ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ, ಕನ್ನಡ, ಇಂಗ್ಲೀಷ್, ಹಿಂದಿ ಭಾಷೆಗಳಲ್ಲಿ ಮೈನವಿರೇಳಿಸುವಂತೆ ಮಾತನಾಡಿದರು.

ವಿಂಗ್ ಕಮಾಂಡರ್ ಆರ್. ತಿರುಮಲಾಚಾರ್‌ರವರು ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಗುರು ಹಿರಿಯರನ್ನು ಗೌರವಿಸಿ, ದೇಶದ ಉತ್ತಮ ಪ್ರಜೆಗಳಾಗುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳುವಂತೆ ಕರೆ ನೀಡಿದರು. ಪ್ರತಿಭಾ ಪುರಸ್ಕಾರ ಸಮಾರಂಭದ ಮತ್ತೊಬ್ಬ ಅತಿಥಿಗಳಾಗಿ ಪಾಲ್ಗೊಂಡಿದ್ದ ಕೇರಳ ಸಮಾಜದ ಕಾರ್ಯದರ್ಶಿಗಳಾದ ಶ್ರೀ ರೇಜಿ ಕುಮಾರ್‌ರವರು ಇಲ್ಲಿನ ಶಾಲಾ ಪ್ರಥಮಿಗರು ಯಾವಾಗಲೂ ಹೀಗೆ ಪ್ರಥಮಿಗರಾಗಿ ಮುಂದುವರೆಯಬೇಕೆಂದು ಆಶಿಸಿದರು. ವಿದ್ಯಾರ್ಥಿಗಳ ಸಾಧನೆಯ ಹಿಂದೆ ಬೆನ್ನೆಲುಬಾಗಿರುವ ಪೋಷಕರು, ಶಿಕ್ಷಕರನ್ನು ಮರೆಯದಿರುವಂತೆ ಕರೆನೀಡಿದರು. ಆರ್ಥಿಕ ತೊಂದರೆಯಿಂದಾಗಿ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ನಿಲ್ಲಿಸಬಾರದು. ಕೇರಳ ಸಮಾಜ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವ ಭರವಸೆಯನ್ನು ನೀಡಿದರು. ಶ್ರೀ ರೇಜಿ ಕುಮಾರ್‌ರವರು ಕೇರಳ ಸಮಾಜ ನಡೆಸುತ್ತಿರುವ ವಿವಿಧ ಚಟುವಟಿಕೆಗಳ ಪರಿಚಯ ಮಾಡಿಕೊಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರು ಮಾತನಾಡುತ್ತ ತಮ್ಮ 13 ವರ್ಷಗಳ ಮಿಲಿಟರಿ ಸೇವೆಯ ಅನುಭವವನ್ನು ಹಂಚಿಕೊಂಡರು. ಇತ್ತೀಚೆಗೆ ವಾಯುಸೇನೆಯ ವಿಮಾನ ದುರಂತದಲ್ಲಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಸೇನಾಧಿಕಾರಿಗಳು, ವಿಶೇಷವಾಗಿ ಕರ್ನಾಟಕದ ಏಕನಾಥ ಶೆಟ್ಟಿಯನ್ನು ಸ್ಮರಿಸಿದರು. ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಬಾಕ್ಸಿಂಗ್ ಪಟು ಮೇರಿಕೋಮಾಳ ಸಾಹಸ, ಸಾಧನೆಯನ್ನು ಪ್ರಸ್ತಾಪಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇವರ ನಿದರ್ಶನಗಳು ವಿದ್ಯಾರ್ಥಿಗಳಲ್ಲಿ ದೇಶಭಕ್ತಿ ಪುಟಿದೇಳಿಸಲಿ ಎಂದು ಆಶಿಸಿದರು.

ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಿದ 300 ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಾಲಯ ಪ್ರಮುಖರೂ, ಹಿರಿಯರೂ ಆದ ಶ್ರೀಯುತ. ಜಿ.ಎಸ್ ಕೃಷ್ಣಮೂರ್ತಿಯವರು ಪ್ರತಿಜ್ಞೆಯನ್ನು ಬೋಧಿಸಿದರು. ಈ ಸಂದರ್ಭದಲ್ಲಿ ಅವರು ಪ್ರತಿಜ್ಞೆಯನ್ನು ಕೈಗೊಳ್ಳುವುದರ ಮಹತ್ವವನ್ನು ವಿವರಿಸಿದರು. ಉತ್ತರ ಜಿಲ್ಲೆಯ ಪದಾಧಿಕಾರಿಗಳಾದ ಶ್ರೀ ಸಿದ್ದೇಗೌಡರು ದಾನಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ಶ್ರೀಮತಿ ಅರುಣಾರವರ ಸುಶ್ರಾವ್ಯವಾದ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ.ಎಸ್ ಜಿ ತಾಂಬೆಯವರು ಸಮಾರಂಭದ ಅತಿಥಿಗಳನ್ನು ಸ್ವಾಗತಿಸಿ, ಪರಿಚಯಿಸಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಾಂತೀಯ ಖಜಾಂಚಿಗಳಾದ ಶ್ರೀ. ಜೆ.ಎಂ ಜೋಶಿಯವರು ಪ್ರಾಸ್ತಾವಿಕದಲ್ಲಿ ಶಿಕ್ಷಕ ಸಂಘವು ನಡೆದು ಬಂದ ದಾರಿಯನ್ನು ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕಗಳಿಸಿದ ಉತ್ತರ ಜಿಲ್ಲೆಯ ಶಿಕ್ಷಕರ ಮಕ್ಕಳನ್ನು ಪುರಸ್ಕರಿಸಲಾಯಿತು. 225 ಶಾಲೆಗಳ ಪ್ರಥಮಿಗರನ್ನು ಸಮಾರಂಭದಲ್ಲಿ ಪುರಸ್ಕರಿಸಲಾಯಿತು. ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಪದಾಧಿಕಾರಿಗಳಾದ ಶ್ರೀಯುತ ಟಿ.ಆರ್. ಮಂಜುನಾಥ್, ಎಸ್. ಕೃಷ್ಣ, ಹರಿದಾಸ್, ಎಂ.ಎಸ್ ಜನಾರ್ಧನ, ಶ್ರೀಮತಿ ದಾಕ್ಷಾಯಿಣಿ ಮುಂತಾದವರು ಉಪಸ್ಥಿತರಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಯಾದ ಶ್ರೀ ಗಂಗಪ್ಪನವರು ವಂದನಾರ್ಪಣೆ ನೆರವೇರಿಸಿದರು. ಸುಶ್ರಾವ್ಯವಾದ 'ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ವರದಿ : **ಎಸ್.ಜಿ ತಾಂಬೆ**
ಅಧ್ಯಕ್ಷರು, ಬೆಂಗಳೂರು ಉತ್ತರ ಜಿಲ್ಲೆ

# ಆಧುನಿಕ ಶಿಕ್ಷಣ ದುರ್ಬಲ ಮನಸ್ಸಿನ ಮಕ್ಕಳನ್ನು ರೂಪಿಸುತ್ತಿದೆಯೇ?

ಜುಲೈ 4ರ ಪತ್ರಿಕೆಯಲ್ಲಿ ಪ್ರಕಟವಾದ ಎರಡು ಸುದ್ದಿಗಳು ಮನಸ್ಸನ್ನು ಚಿಂತೆಗೆ ದೂಡಿದವು. ತನ್ನ ಸ್ನೇಹಿತನ ಕುಡಿತದಿಂದ ಬೇಸತ್ತ ಕಾಲೇಜು ವಿದ್ಯಾರ್ಥಿಯೊಬ್ಬಳು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಳೆಂಬುದು ಮೊದಲ ಸುದ್ದಿ. ಅವಳ ಆತ್ಮಹತ್ಯೆಯ ಸುದ್ದಿ ಕೇಳಿದ ಆತನ ಸ್ನೇಹಿತನೂ ಆತ್ಮಹತ್ಯೆಗೆ ಪ್ರಯತ್ನಿಸಿದ್ದ. ಆತನೂ ವಿದ್ಯಾವಂತನೇ. ಎರಡನೆಯ ಸುದ್ದಿ, ಬೆಂಗಳೂರಿನ ಪ್ರತಿಷ್ಠಿತ ಬಾಲ್ಡ್ವಿನ್ಸ್ ಬಾಲಕರ ಶಾಲೆಯ ವಿದ್ಯಾರ್ಥಿಯೊಬ್ಬ ತನ್ನ ಅಪಾರ್ಟ್‌ಮೆಂಟಿನ ಹತ್ತನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದು. ಶಾಲೆಯಲ್ಲಿ ಆತನ ಸ್ನೇಹಿತರು ಚುಡಾಯಿಸಿದ್ದರಿಂದ ಬೇಸತ್ತು ತಾನು ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಆತ ತನ್ನ ಚೀಲದಲ್ಲಿದ್ದ ಚೀಟಿಯೊಂದರಲ್ಲಿ ಬರೆದಿಟ್ಟಿದ್ದ. ಒಳ್ಳೆಯ ಕುಟುಂಬದ ಹಿನ್ನಲೆ, ತಕ್ಕಮಟ್ಟಿಗೆ ಸ್ಥಿತಿವಂತರಾದ ಪೋಷಕರು, ಪ್ರತಿಷ್ಠಿತ ಶಾಲೆಯಲ್ಲಿ ವಿದ್ಯಾಭ್ಯಾಸ – ಇಷ್ಟೆಲ್ಲಾ ಇದ್ದಾಗ್ಯೂ ಈ ಹುಡುಗನ ಅಂತ್ಯ ದಾರುಣವಾಗಿ ಆಗಿದ್ದು ಬಹಳ ದುಃಖದ ಸಂಗತಿ.

ಈ ರೀತಿಯ ಘಟನೆಗಳು ನಡೆಯುತ್ತಿರುವುದು ಮೊದಲ ಸಲವೇನಲ್ಲ. ಪತ್ರಿಕೆಗಳಲ್ಲಿ ಬರುವ ಮೂರನೆಯ ಪುಟದ ಸುದ್ದಿಗಳು ಇಂತಹವಕ್ಕೇ ಮೀಸಲು. ಪ್ರೀತಿ ಕೈಕೊಟ್ಟದ್ದಕ್ಕೆ, ಪೋಷಕರು ಛೇಡಿಸಿದ್ದಕ್ಕೆ, ಶಿಕ್ಷಕರು ಶಿಕ್ಷೆ ನೀಡಿದ್ದಕ್ಕೆ, ಇತ್ಯಾದಿ ಸಣ್ಣ ಸಣ್ಣ ಕಾರಣಕ್ಕೂ ಬಾಲಕ– ಬಾಲಕಿಯರು, ಯುವಕ–ಯುವತಿಯರು ಆತ್ಮಹತ್ಯೆಗೆ ಮೊರೆ ಹೋಗುತ್ತಿರುವುದು ಆತಂಕಕಾರಿ ಸಂಗತಿ. ಮತ್ತು ವಿದ್ಯಾವಂತರೇ ಹೀಗೆ ಮಾಡುತ್ತಿರುವುದೂ ಚಿಂತಿಸಬೇಕಾದ ವಿಷಯವೇ. ರೀತಿ, ಪ್ರತಿಷ್ಠಿತ ಶಾಲೆಗೆ ಸೇರಿವಿದ್ಯಾರ್ಥಿಗಳು ಕುಡಿತ–ಡ್ರಗ್‌ಚಟಕ್ಕೆ ಒಳಗಾಗುವುದೂ ಇತ್ತೀಚೆಗೆ ಹೆಚ್ಚುತ್ತಿದೆ. ವಿದ್ಯಾರ್ಥಿನಿಯರೂ ಸಿಗರೇಟು ಸೇದುವುದು, ಕುಡಿಯುವುದು ಇತ್ತೀಚೆಗೆ ಹೆಚ್ಚಿದ್ದು ಕಂಡು ಬರುತ್ತಿದೆ. ಪ್ರತಿಷ್ಠಿತ ಶಾಲೆಗೆ ಸೇರಿದ ಹೈಸ್ಕೂಲು ವಿದ್ಯಾರ್ಥಿನಿಯರಿಬ್ಬರು ಸ್ನೇಹಿತರೊಡಗೂಡಿ ತಡರಾತ್ರಿಯವರೆಗೆ ಪಾರ್ಟಿ ಮಾಡಿ ಕಂಠಮಟ್ಟ ಕುಡಿದು, ಮನೆಗೆ ವಾಪಸ್ಸಾಗುವಾಗ ಬೆಂಗಳೂರಿನ ಫ್ಲೈಓವರೊಂದರ ಗೋಡೆಗೆ ಅವರ ದ್ವಿಚಕ್ರವಾಹನ ಹೊಡೆದು ಕೆಳಗೆ ಬಿದ್ದದ್ದು ಒಂದೆರಡು ವರ್ಷಗಳ ಹಿಂದೆ ವರದಿಯಾಗಿತ್ತು.

ಬಾಲ್ಡ್ವಿನ್ಸ್ ಶಾಲೆಯ ವಿದ್ಯಾರ್ಥಿಯ ಆತ್ಮಹತ್ಯೆಗೆ ಸಂಬಂಧಿಸಿದಂತೆ, ಆ ಶಾಲೆಯ ಮುಖ್ಯೋಪಾಧ್ಯಾಯರು 'ನಮ್ಮ ಶಾಲೆಯಲ್ಲಿ ಮಕ್ಕಳಿಗಾಗಿ ಆತ್ಮಸಮಾಲೋಚನೆಯ ವ್ಯವಸ್ಥೆ ಇದೆ. ಈ ಬಾಲಕ ಆಪ್ತ ಸಮಾಲೋಚಕರ ಬಳಿ ಚರ್ಚಿಸಿದ್ದಿದ್ದರೆ ಆತನ ಸಮಸ್ಯೆ ಪರಿಹಾರವಾಗುತ್ತಿತ್ತು. ಆತ ಈ ರೀತಿ ಸಾವು ತಂದುಕೊಂಡದ್ದು ಬಹಳ ದುಃಖ ತಂದಿದೆ' ಎಂದು ಹೇಳಿದ್ದೂ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಹೌದು, ಆಪ್ತ ಸಮಾಲೋಚನೆಯಿಂದ ಸಮಸ್ಯೆ ಪರಿಹಾರವಾಗಬಹುದಿತ್ತು. ಆದರೆ, ಶಾಲೆಯಲ್ಲಿ ಆಪ್ತ ಸಮಾಲೋಚನೆಯ ವ್ಯವಸ್ಥೆಯಿದೆ ಎನ್ನುವುದೂ ನನ್ನನ್ನು ಚಿಂತೆಗೆ ಹಚ್ಚಿತು. ಇದರ ಅರ್ಥ, ಈ ರೀತಿಯ ಘಟನೆಗಳು ಆ ಶಾಲೆಯಲ್ಲಿ ಸಾಮಾನ್ಯ ಎಂದ ಹಾಗಾಯಿತು. ಇಲ್ಲದಿದ್ದರೆ ಆಟ–ಪಾಠಗಳಿಗೆ ವ್ಯವಸ್ಥೆ ಮಾಡುವ ಶಾಲೆಯಲ್ಲಿ ಆಪ್ತ ಸಮಾಲೋಚನೆಯ ವ್ಯವಸ್ಥೆ ಏತಕ್ಕಾಗಿ? ಮಕ್ಕಳ ಮನಸ್ಸು ಇಷ್ಟೊಂದು ದುರ್ಬಲವಾಗಿ ಬಿಟ್ಟಿದೆಯೇ? ಅವರನ್ನು ಅರ್ಥ ಮಾಡಿಕೊಳ್ಳಲು, ಅವರ ಸಮಸ್ಯೆಯನ್ನು ಪರಿಹರಿಸಲು ಶಿಕ್ಷಕರಿಗೆ ಮತ್ತು ಪೋಷಕರಿಗೆ ಆಗುತ್ತಿಲ್ಲವೇ? ಮಕ್ಕಳ ಸಮಸ್ಯೆ ಪರಿಹರಿಸಲೂ ಆಪ್ತ ಸಮಾಲೋಚಕರೇ ಬೇಕೆ? ಮಕ್ಕಳಿಗೆ ಶಿಕ್ಷಣದಿಂದ ಜೀವನವನ್ನು ಎದುರಿಸುವ ಧೈರ್ಯ ಬರಬೇಕು. ಎಲ್ಲ ರೀತಿಯ ಕಷ್ಟಗಳನ್ನೂ ಪರಿಹರಿಸಿಕೊಳ್ಳುವ ಸಾಮರ್ಥ್ಯ ಬರಬೇಕು. ಆದರೆ, ಇಂದಿನ ಮಕ್ಕಳು ಕ್ಷುಲ್ಲಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆನ್ನುವುದು, ಅವರಿಗೆ ಜೀವನವನ್ನು ಎದುರಿಸುವ ಧೈರ್ಯ ಇಲ್ಲವೆನ್ನುವುದನ್ನು ತೋರಿಸುತ್ತದೆ. ಕಷ್ಟಗಳು ಬಂದ ಕೂಡಲೇ ಅವರು ಕಂಗೆಡುತ್ತಾರೆ. ನಾವೆಲ್ಲಿ ಎಡವುತ್ತಿದ್ದೇವೆ. ತಪ್ಪಾಗುತ್ತಿರುವುದೆಲ್ಲಿ? ಇದು ಹೀಗೇ ಮುಂದುವರೆದರೆ ಭವಿಷ್ಯ ಹೇಗಿರುವುದು? ಇದಕ್ಕೆ ಪರಿಹಾರವೇನು? ಮಕ್ಕಳ ಭವಿಷ್ಯದ ಬಗ್ಗೆ ಮತ್ತು ನಾಡಿನ ಭವಿಷ್ಯದ ಕುರಿತಾಗಿ ಕಾಳಜಿ ಇರುವವರೆಲ್ಲ ಕೇಳುವ ಪ್ರಶ್ನೆ ಇದು.

ಮಕ್ಕಳಿಗೆ ಸಮಸ್ಯೆಗಳನ್ನು ಎದುರಿಸುವ, ಜೀವನದ ಕಷ್ಟಗಳನ್ನು ಪರಿಹರಿಸಿಕೊಳ್ಳುವ ಕುರಿತಾಗಿ ಇಂದಿನ ಶಿಕ್ಷಣ ವ್ಯವಸ್ಥೆ ಕಲಿಸಿಕೊಡುತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ಅನುಷ್ಠಾನಕ್ಕೆ ತಂದ ಮೆಕಾಲೆ ಶಿಕ್ಷಣ ಪದ್ಧತಿಯೇ ಇಂದಿಗೂ ಮುಂದುವರೆದಿರುವುದು ಇದಕ್ಕೆ ಕಾರಣ – ಕಾರಕೂನರನ್ನು, ಉದ್ದಿಮೆಗಳಿಗೆ ಬೇಕಾದ ಕೆಲಸಗಾರರನ್ನು ತಯಾರಿಸುವುದೇ ಈ ಶಿಕ್ಷಣದ ಗುರಿ. ಪೋಷಕರ ಮತ್ತು ಶಿಕ್ಷಕರ ಗುರಿಯೂ, ಮಕ್ಕಳು ಒಳ್ಳೆಯ ಕೆಲಸಕ್ಕೆ ಸೇರಿಕೊಳ್ಳುವುದರತ್ತವೇ ಇರುತ್ತದೆ. ಮತ್ತು ಇಂದಿನ ಶಿಕ್ಷಣದಲ್ಲಿ ಸ್ಪರ್ಧೆಯೂ ಹೆಚ್ಚಾಗಿದೆ. ಹತ್ತನೇ ತರಗತಿಯಲ್ಲಿ ಶೇಕಡಾ 99 ಅಂಕ ಬರದಿದ್ದರೆ ಅನೇಕ ಶಾಲೆಗಳು ಮಕ್ಕಳನ್ನು ಕಾಲೇಜಿಗೆ ಸೇರಿಸಿಕೊಳ್ಳುವುದಿಲ್ಲ. ಇನ್ನು ಹನ್ನೆರಡನೇ ತರಗತಿ (ಅಥವಾ ಪಿಯುಸಿ) ನಂತರ ಐಐಟಿ ಅಂತಹ ಪ್ರತಿಷ್ಠಿತ ಕಾಲೇಜುಗಳಿಗೆ ಸೇರಿಸಿಕೊಳ್ಳಬೇಕಾದರೆ ಎಂಟು ಅಥವಾ ಒಂಭತ್ತನೇ ತರಗತಿಯಿಂದಲೇ ತಯಾರಿ ಪ್ರಾರಂಭಿಸಬೇಕು. ಇದರಿಂದಾಗಿ ಮಕ್ಕಳ ಮನಸ್ಸಿನ ಮೇಲೆ ಅತೀವ ಒತ್ತಡ. ಇಷ್ಟೆಲ್ಲಾ ತಯಾರಿಯ ನಂತರ ಸ್ವಲ್ಪ ಕಡಿಮೆ ಅಂಕ ಬಂದರೂ ಅದನ್ನು ಮನಸ್ಸಿಗೆ

ಪುಟ 10 ಕ್ಕೆ ➤

# ಸದನದಲ್ಲಿ ಶಾಸಕ ಅರುಣ ಶಹಾಪೂರ್

**ಪ್ರಶ್ನೆ–1 : ರಾಜ್ಯದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ವಿವಿಧ ಇಲಾಖೆಗಳ ಅಡಿ ಬರುವ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಸರ್ಕಾರದ ನೀತಿ ಏನು; ಪ್ರಸಕ್ತ ಯಾವ ಯಾವ ಇಲಾಖೆಯಿಂದ ಶಾಲಾ ಕಾಲೇಜುಗಳಿಗೆ ಅನುದಾನ ಕೋರಿ ಬಂದಿರುವ ಪ್ರಸ್ತಾವನೆಗಳಿಗಾಗಿ ಸಂಪುಟ ಉಪ ಸಮಿತಿ ರಚಿಸಿ ಪರಿಶೀಲಿಸಲಾಗುತ್ತಿದೆ.(ಪ್ರತಿಯೊಂದರ ವಿವರ ನೀಡುವುದು)**

**ಉತ್ತರ:** ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿ: 6–10–2007ರನ್ವಯ ದಿ: 1.6.1987ರಿಂದ 1992–93ನೇ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ನಿರಂತರವಾಗಿ ನಡೆಯುತ್ತಿರುವ ಖಾಸಗಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಿದೆ. ಅದೇ ರೀತಿ ಸರ್ಕಾರದ ಆದೇಶ ಸಂಖ್ಯೆ ಇಡಿ 217 ಪಿಎಂಸಿ 2008 ದಿ: 8–9–2008ರಲ್ಲಿ 1993–94 ರಿಂದ 1994–95ನೇ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿ ನಿರಂತರವಾಗಿ ನಡೆಯುತ್ತಿರುವ ಖಾಸಗಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಿದೆ.

**ಪ್ರಶ್ನೆ–2 : 1987ರಿಂದ 1995ರ ಮಧ್ಯದಲ್ಲಿ ಆರಂಭಿಸಿರುವ ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ನೀತಿ ಏನು; ಈ ನಿಟ್ಟಿನಲ್ಲಿ ಸರ್ಕಾರ ಎದುರಿಸುತ್ತಿರುವ ಸಮಸ್ಯೆ ಏನು;**

**ಉತ್ತರ:** 1987 ರಿಂದ 1995ರ ಮಧ್ಯದಲ್ಲಿ ಪ್ರಾರಂಭಿಸಿರುವ ಅನುದಾನರಹಿತ ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿ: 6–10–2007ರಲ್ಲಿ ದಿ: 1–6–1987ರಿಂದ 1992–93ರವರೆಗೆ ಮತ್ತು 217ಪಿಎಂಸಿ 2008 ದಿ: 8–9–2008ರಲ್ಲಿ 1993–94 ರಿಂದ 1994–95ನೇ ಸಾಲಿನ ಅವಧಿಯಲ್ಲಿ ಪ್ರಾರಂಭಿಸಿದ ಖಾಸಗಿ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಅವಕಾಶ ಕಲ್ಪಿಸಿದೆ.

**ಪ್ರಶ್ನೆ–3 : ಸರ್ಕಾರಿ ನೌಕರರಿಗೂ ಅನುದಾನಿತ ಸಿಬ್ಬಂದಿಗೂ ಹಲವು ಹಣಕಾಸು ಸೌಲಭ್ಯಗಳಲ್ಲಿ ಹಾಗೂ ಸೇವಾ ಸೌಲಭ್ಯಗಳಲ್ಲಿ ವ್ಯತ್ಯಾಸಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದ ಕ್ರಮ ಏನು?**

**ಉತ್ತರ:** ಸರ್ಕಾರದ ಆದೇಶ ಸಂಖ್ಯೆ ಇಡಿ 424 ಪಿಎಂಸಿ 2015, ದಿ: 27–6–2016ರನ್ವಯ ಅನುದಾನಿತ ಶಾಲಾ ಕಾಲೇಜುಗಳ ಮಹಿಳಾ ನೌಕರರಿಗೆ 135 ದಿನಗಳ ಪ್ರಸೂತಿ ರಜೆಯನ್ನು 180 ದಿನಗಳಿಗೆ ವಿಸ್ತರಿಸಿದೆ. ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 19ಪಿಎಂಸಿ 2013, ದಿ: 6–7–2016ರನ್ವಯ 5 ಸ್ಥಗಿತ ವೇತನ ಬಡ್ತಿಗಳನ್ನು 8ಕ್ಕೆ ಹೆಚ್ಚಿಸಿ ಆದೇಶಿಸಿದೆ. (ಪ್ರತಿ ಲಗತ್ತಿಸಿದೆ)

**ಪ್ರಶ್ನೆ–4 : 1995ರ ನಂತರ ಆರಂಭವಾಗಿರುವ ಇಲ್ಲಿಯವರೆಗಿನ ಶಾಲಾ ಕಾಲೇಜುಗಳಿಗೆ ಅನುದಾನ ಒದಗಿಸುವ ದೃಷ್ಟಿಯಿಂದ ಸರ್ಕಾರದ ಚಿಂತನೆ ಹಾಗೂ ಕ್ರಮ ಏನು?**

**ಉತ್ತರ:** 1995ರ ನಂತರ ಪ್ರಾರಂಭವಾಗಿರುವ ಖಾಸಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನುದಾನ ಒದಗಿಸುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

**ಪ್ರಶ್ನೆ–5 :** ಸರ್ಕಾರಿ ನೌಕರರು ಹಳೇ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಲು ಆಗ್ರಹಿಸುತ್ತಿರುವುದನ್ನು ಪರಿಗಣಿಸಿ ಸರ್ಕಾರ ಹಳೇ ಪಿಂಚಣಿ ವ್ಯವಸ್ಥೆಯನ್ನು ಮತ್ತೆ ಜಾರಿಗೊಳಿಸುವ ಕ್ರಮ ಕೈಗೊಳ್ಳುವುದೇ ?

**ಉತ್ತರ:** ನೂತನ ಪಿಂಚಣಿ ಯೋಜನೆಯನ್ನು ಸರ್ಕಾರಿ ನೌಕರರಿಗೆ ಲಾಭದಾಯಕ ಯೋಜನೆಯಾಗಿದ್ದು, ಈ ಯೋಜನೆಯು ಸರ್ಕಾರದ ನೀತಿ ನಿಯಮಗಳಿಗೆ ಸಂಬಂಧಿಸಿದ್ದು, ಈಗಾಗಲೇ ದಿನಾಂಕ:1–4–2006 ರಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿರುವುದರಿಂದ, ಈ ಯೋಜನೆಯ ಬದಲಿಗೆ ಹಳೇ ಪಿಂಚಣಿ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸುವ ಪ್ರಮೇಯ ಉದ್ಭವಿಸುವುದಿಲ್ಲ.

**ಪ್ರಶ್ನೆ–6 : ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಸ ರಾಷ್ಟ್ರೀಯ ಪಿಂಚಣಿಯಡಿ ಸೌಲಭ್ಯವನ್ನು ಪಡೆಯುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ?**

**ಉತ್ತರ:** ದಿನಾಂಕ 2–7–2016ರ ಅಂತ್ಯಕ್ಕೆ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ಪಿಂಚಣಿಯಡಿ ಸೌಲಭ್ಯವನ್ನು ಪಡೆಯುತ್ತಿರುವ ಸಿಬ್ಬಂದಿಗಳ ಸಂಖ್ಯೆ: 1,62,417.

**ಪ್ರಶ್ನೆ–7 : 2016–17ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಯಾವ ಯಾವ ಶಾಲೆಗಳಲ್ಲಿ ಐಸಿಟಿ@ಗಣಕ ಶಿಕ್ಷಣ ಜಾರಿಗೆ ಬಂದಿದೆ. (ಜಿಲ್ಲಾವಾರು ಶಾಲೆಗಳ ಮತ್ತು ಶಿಕ್ಷಕರ ವಿವರ ನೀಡುವುದು)**

**ಉತ್ತರ:** ಐಟಿ@ ಸ್ಕೂಲ್ಸ್ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಾರಂಭಿಕ ಚಟುವಟಿಕೆಗಳ ಅನುಷ್ಠಾನಗೊಳ್ಳಲಾಗುತ್ತಿದ್ದು, 2016–17ನೇ ಸಾಲಿನಲ್ಲಿ ಅಂದಾಜು 1000 ಶಾಲೆಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.

**ದೇವರಂತೆ ನಿಮ್ಮ ಗುರುವನ್ನು ಪೂಜಿಸಿ, ಆದರೆ ವಿಮರ್ಶೆ ಮಾಡದೆ ಅವರ ಮಾತನ್ನು ಕೇಳಬೇಡಿ – ಸ್ವಾಮಿ ವಿವೇಕಾನಂದ**

➢ ಪುಟ 8 ರಿಂದ..... ಆಧುನಿಕ ಶಿಕ್ಷಣ...

ಹಚ್ಚಿಕೊಂಡು ಕುಗ್ಗಿ ಹೋಗುವುದು. ಇನ್ನು ಚಿಕ್ಕಂದಿನಿಂದಲೇ ತಪ್ಪುಗಳನ್ನು ಮಾಡಿದಾಗ ಛೇಡಿಸುವುದು – ಮಕ್ಕಳು ಯಾವುದೇ ತಪ್ಪು ಮಾಡಬಾರದೆಂದು ಪೋಷಕರು ಮತ್ತು ಶಿಕ್ಷಕರು ಇಚ್ಚಿಸುತ್ತಾರೆ. ಸಣ್ಣ ತಪ್ಪುಗಳಾದರೂ ಶಿಕ್ಷೆ ನೀಡುತ್ತಾರೆ. ಇದರಿಂದಾಗಿ ಅನೇಕ ಮಕ್ಕಳು ಹೆದರಿಕೆಯಲ್ಲೇ ಜೀವನ ಮಾಡುತ್ತಾರೆ – ಎಲ್ಲಿ ತನ್ನಿಂದ ತಪ್ಪಾಗಿ ಬಿಡುವುದೋ, ಎಲ್ಲಿ ತನ್ನ ಪೋಷಕರು ಕೋಪಿಸಿಕೊಳ್ಳುವರೋ, ಶಿಕ್ಷಕರು ಶಿಕ್ಷೆ ನೀಡಿಬಿಟ್ಟರೆ, ಇತ್ಯಾದಿ ಚಿಂತೆಗಳು ಅವರನ್ನು ಕಾಡುತ್ತಿರುತ್ತದೆ. ಈ ರೀತಿಯ ಮನೋಭಾವನೆಯಿಂದಲೂ ಮನಸ್ಸು ಪೂರ್ಣ ವಿಕಾಸಗೊಳ್ಳದು ಮತ್ತು ಜೀವನದ ಕಷ್ಟಗಳನ್ನು ಎದುರಿಸಲು ತಯಾರಾಗದು.

ಇಂದಿನ ಶಿಕ್ಷಣದಲ್ಲಿ ಗಣಿತ, ವಿಜ್ಞಾನಗಳಿಗೆ ಇರುವಷ್ಟು ಮಹತ್ವ ಭಾಷೆಯನ್ನು ಕಲಿಯಲು, ಇತಿಹಾಸವನ್ನು ಕಲಿಯಲು ಇಲ್ಲ ಮತ್ತು ನೈತಿಕ ಶಿಕ್ಷಣಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸ್ಥಾನವೇ ಇಲ್ಲ. ಶ್ರಮಸೇವೆಯಂತಹ ದೇಹವನ್ನು ಸೇವಾಕಾರ್ಯಗಳಿಗೆ, ಶ್ರಮದಾಯಕ ಕೆಲಸಗಳಿಗೆ ತಯಾರಿಸುವ ವ್ಯವಸ್ಥೆ ಇಲ್ಲ. ಮನೆಯಲ್ಲಿಯೂ ಮಕ್ಕಳಿಗೆ ಯಾವುದೇ ಕೆಲಸಗಳನ್ನು ಹೇಳುವುದಿಲ್ಲ. ಎಲ್ಲ ಕೆಲಸಗಳನ್ನೂ ಮಾಡಲು ಕೆಲಸದವರೋ, ಅಥವಾ ಯಂತ್ರಗಳೋ ಇರುತ್ತದೆ. ಮಕ್ಕಳು ಕೇಳಿದ್ದನ್ನೆಲ್ಲಾ ಪೋಷಕರು ಕೂಡಲೇ ತಂದು ಕೊಡುತ್ತಾರೆ. ಊಟ ಮಾಡಿದ ತಟ್ಟೆಯನ್ನೂ ಮಕ್ಕಳು ಎತ್ತಿಡುವುದಿಲ್ಲ. ಹೀಗಾಗಿ, ಕಷ್ಟಗಳು ಎದುರಾದಾಗ ಮನಸ್ಸು ಮುದುಡಿಬಿಡುತ್ತದೆ. ಜೀವನವನ್ನೇ ಮುಗಿಸಿಬಿಡುವತ್ತ ಓಡಿಬಿಡುತ್ತದೆ.

ಇದರ ಜೊತೆಗೆ ದೂರದರ್ಶನದಲ್ಲಿ ಬರುವ ಧಾರವಾಹಿಗಳೂ ಜೀವನದತ್ತ ಋಣಾತ್ಮಕ ಭಾವನೆಯನ್ನೇ ಬೆಳಸುತ್ತದೆ – ಜೀವನವೆಂದರೆ ಕೇವಲ ಪ್ರೀತಿ–ಪ್ರೇಮ, ಹಣ, ಅಕಾರ, ಸೇಡು ತೀರಿಸಿಕೊಳ್ಳುವುದು, ಕೊಲೆ, ಮೋಸ ಮಾಡುವುದು ಎಂಬ ಚಿತ್ರವನ್ನೇ ಅವು ನೀಡುತ್ತವೆ. ಇವೆಲ್ಲಕ್ಕೂ ಕಿರೀಟಪ್ರಾಯವಾದಂತದ್ದು ಇಂಟರ್ನೆಟ್, ಸಾಮಾಜಿಕ ತಾಣಗಳು, ಚ್ಯಾಟ್‌ಗಳು – ಫೇಸ್‌ಬುಕ್, ವಾಟ್ಸ್‌ಅಪ್, ಟ್ವಿಟ್ಟರ್, ಈಮೈಲ್, ಇವೆಲ್ಲವೂ ಮಕ್ಕಳನ್ನು ದಾರಿ ತಪ್ಪಿಸುವ ಸಾಧನಗಳೇ ಆಗುತ್ತಿವೆ. ಇವನ್ನು ಜಾಣತನದಿಂದ ಉಪಯೋಗಿಸಿಕೊಂಡರೆ, ಇವು ಬಹಳ ಸಹಕಾರಿಯಾಗುತ್ತವೆ. ಆದರೆ ವಿವೇಕವಿಲ್ಲದೆ ಬಳಸಿದರೆ ಅನರ್ಥಕಾರಿಯೂ ಆಗುತ್ತವೆ. ಮಕ್ಕಳು ಈ ಸಾಧನಗಳಿಂದಲೂ ಕೆಟ್ಟ ಸಹವಾಸಕ್ಕೆ ಬೀಳುತ್ತಿದ್ದಾರೆ. ತಪ್ಪು ದಾರಿ ಹಿಡಿಯುತ್ತಿದ್ದಾರೆ. ಇವು ಕೂಡಾ ಒಂದು ಚಟವಾಗಿಯೇ ಪರಿಣಮಿಸುತ್ತಿದೆ. ಈ ಚಟಕ್ಕೆ ಬಿದ್ದವರು ಓದನ್ನೂ ಕಡೆಗಣಿಸಿಬಿಡುತ್ತಾರೆ ಎನ್ನುವುದು ಎಲ್ಲರ ಗಮನಕ್ಕೆ ಬರುತ್ತಿರುವ ಸಂಗತಿ. ತನ್ನ ತಾಯಿ, ಫೇಸ್‌ಬುಕ್ ಉಪಯೋಗಿಸಬೇಡ ಎಂದದ್ದಕ್ಕೆ ವಿದ್ಯಾರ್ಥಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಕೆಲವು ತಿಂಗಳುಗಳ ಹಿಂದೆ ವರದಿಯಾಗಿತ್ತು.

ಶಾಲೆಯಲ್ಲಿ ಆಪ್ತಸಮಾಲೋಚನೆಯ ವ್ಯವಸ್ಥೆ ತಾತ್ಕಾಲಿಕ ವ್ಯವಸ್ಥೆಯಾಗಬೇಕು ಅಷ್ಟೇ. ಅದಕ್ಕಿಂತ ಮುಖ್ಯವಾಗಿ ಜೀವನವನ್ನು ಎದುರಿಸುವ, ಜೀವನದ ಕಷ್ಟಗಳನ್ನು ಪರಿಹರಿಸಿಕೊಳ್ಳುವ ಶಿಕ್ಷಣದ ಕುರಿತಾಗಿ ಶಾಲೆಗಳು ಯೋಚಿಸಬೇಕು. ಯೋಗ, ಧ್ಯಾನ, ಶ್ರಮ, ಸೇವೆ, ನೈತಿಕ ಶಿಕ್ಷಣ ಇತ್ಯಾದಿಗಳು ಪಠ್ಯಕ್ರಮದ ಕಡ್ಡಾಯ ಭಾಗಗಳಾಗಬೇಕು. ಪಾಠದಷ್ಟೇ ಆಟಕ್ಕೂ ಮಹತ್ವ ಸಿಗಬೇಕು. ಸ್ನೇಹಿತರನ್ನು ಸಂಪಾದಿಸಿಕೊಳ್ಳುವ ಗುಂಪಿನಲ್ಲಿ ಕೆಲಸ ಮಾಡುವ ಅಭ್ಯಾಸ ಚಿಕ್ಕಂದಿನಿಂದಲೇ ಮಾಡಿಸಬೇಕು.

**ಕೃಪೆ : ವಿಕ್ರಮ ವಾರಪತ್ರಿಕೆ**

# ಸೋದರಿ ನಿವೇದಿತ –150



**ಸೋದರಿ ನಿವೇದಿತಾ ಅವರು ಅಕ್ಟೋಬರ್ 28,1867ರಲ್ಲಿ ಐರ್ಲೆಂಡ್ ದೇಶದ ಕೌಂಟಿ ಟೈರೋನ್ ಎಂಬಲ್ಲಿ ಜನಿಸಿದರು. ಅವರು ಹುಟ್ಟಿದಾಗ ಇದ್ದ ಹೆಸರು ಮಾರ್ಗರೇಟ್ ಎಲಿಜಬೆತ್ ನೋಬೆಲ್. ವಿದೇಶದಿಂದ ಬಂದು ಭಾರತೀಯ ಆಧ್ಯಾತ್ಮವನ್ನು ಆದರಿಸಿ, ಭಾರತೀಯ ಸೇವೆಗೆ ಅದರಲ್ಲೂ ಮಹಿಳಾ ಜಾಗೃತಿಗಾಗಿ ತಮ್ಮನ್ನು ಅರ್ಪಿಸಿಕೊಂಡ ಧೀಮಂತ ಮಹಿಳೆ. ಸ್ವಾಮಿ ವಿವೇಕಾನಂದರ ಪ್ರಭಾವಕ್ಕೊಳಗಾದ ಸೋದರಿ ನಿವೇದಿತಾ ಅವರು ಭಾರತೀಯ ಸಮಾಜದ ಔನ್ನತ್ಯಕ್ಕಾಗಿ ಹಗಲಿರುಳು ಶ್ರಮಿಸಿದರು. ಸ್ವಾಮಿವಿವೇಕಾನಂದರನ್ನು ತಮ್ಮ 'ಗುರುದೇವ' ಎಂದು ಭಾವಿಸಿದ್ದರು. 1898 ಮಾರ್ಚ್ 25ರ ಶುಕ್ರವಾರದಂದು ಮಾರ್ಗರೇಟ್ ನೋಬೆಲ್ಲರಿಗೆ ಸ್ವಾಮಿ ವಿವೇಕಾನಂದರು 'ನಿವೇದಿತಾ' ಎಂದು ಹೆಸರನ್ನು ಕೊಟ್ಟರು.**

**ಮುಂದೆ ನಿವೇದಿತಾ ಅವರು ಶಿಕ್ಷಕಿಯಾಗಿ ಸಮಾಜಸೇವಕಿಯಾಗಿ ಬರಹಗಾರ್ತಿಯಾಗಿ, ಭಾರತೀಯರೊಂದಿಗೆ ಬೆರೆತು ಸೇವೆಮಾಡಿದರು. ನಿವೇದಿತಾ ಅವರು ಶ್ವೇತ ಶುಭ್ರವಸ್ತ್ರ ಧರಿಸಿ, ರುದ್ರಾಕ್ಷಿಮಾಲೆ ಹಾಕಿಕೊಂಡು ನಾಡಿನೆಲ್ಲೆಡೆ ಸಂಚರಿಸಿ ಭಾರತೀಯರ ಕಣ್ಮನಗಳನ್ನು ತೆರೆಸಿದರು. ಸೋದರಿ ನಿವೇದಿತಾ ಅವರು ಜನಿಸಿ 150 ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕವು ಪ್ರತಿಭಾ ಪುರಸ್ಕಾರವನ್ನು' ಸೋದರಿ ನಿವೇದಿತಾ' ಅವರಿಗೆ ಅರ್ಪಿಸುತ್ತದೆ.**

# ಪ್ರತಿಭಾ ಪುರಸ್ಕಾರ ಚಿತ್ರಗಳು




7–8–2016 ರಂದು ನಡೆದ ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಭಾ ಪುರಸ್ಕಾರದಲ್ಲಿ ಪುರಸ್ಕೃತ ದಿವ್ಯಾಂಗ ವಿದ್ಯಾರ್ಥಿಗಳೊಂದಿಗೆ ಮುಖ್ಯ ಅತಿಥಿಗಳು




ಮುಖ್ಯ ಅತಿಥಿಗಳಾಗಿದ್ದ ಡಾ. ಎನ್. ವಿ. ರಘುರಾಂ ಅವರಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ



ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಆಹ್ವಾನಿತರು



ವಿದ್ಯಾರ್ಥಿಗಳ ಪ್ರತಿಜ್ಞೆ ಸ್ವೀಕಾರ



ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ, ಪೋಷಕ ಹಾಗೂ ಶಿಕ್ಷಕ ವೃಂದ

**Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026**
**Date of Posting 20th or 21st of every month**



# ಅಭಿನಂದನೆ

ಪ್ರೊ॥ ಕೃ.ನರಹರಿಯವರು ಬೆಂಗಳೂರಿನ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರಾಗಿ, 18 ವರ್ಷಗಳ ದೀರ್ಘಕಾಲ ಶಾಸಕರಾಗಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾಗಿ, ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾ ಸಂಘದ ಅಧ್ಯಕ್ಷರಾಗಿ ಹಾಗೂ ಸಮಾಜದ ವಿವಿಧ ಕ್ಷೇತ್ರಗಳ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಹಾಪೋಷಕರಾಗಿ ಈಗಲೂ ಎಲ್ಲ ಶಿಕ್ಷಕರಿಗೂ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ.

ಪ್ರೊ॥ ನರಹರಿಯವರು 'ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಪತ್ರಿಕೆಗೆ ಉತ್ತಮ ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಶಿಕ್ಷಣ ಕ್ಷೇತ್ರಕ್ಕೆ ಶ್ರೀ ನರಹರಿಯವರು ನೀಡಿರುವ ಅಪಾರ ಸಾಧನೆ ಹಾಗೂ ಕೊಡುಗೆಯನ್ನು ಗುರುತಿಸಿ ಡಾ॥ ಅಂಬೇಡ್ಕರ್ ಅಂತರಾಷ್ಟ್ರೀಯ ಮಿಷನ್ ಸಂಸ್ಥೆಯು "ಡಾ॥ ಅಂಬೇಡ್ಕರ್ ರಾಷ್ಟ್ರೀಯ ಪುರಸ್ಕಾರ"ವನ್ನು ನೀಡಿ ಗೌರವಿಸಿದೆ. ದೆಹಲಿಯಲ್ಲಿ ಜೂನ್ 3ನೇ ತಾರೀಖಿನಂದು ನಡೆದ ಸಮಾರಂಭದಲ್ಲಿ ಪ್ರಶಸ್ತಿ ಫಲಕದ ಜೊತೆಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು. ಒಟ್ಟು 8 ಸಾಧಕರಿಗೆ ಅವರವರ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕದಿಂದ ಪ್ರೊ॥ ಕೃ ನರಹರಿಯವರು ಮತ್ತು ಮಾಜಿ ರಾಜ್ಯಪಾಲರು ಹಾಗೂ ನ್ಯಾಯಮೂರ್ತಿಗಳಾದ ಶ್ರೀ ರಾಮಾ ಜೋಯಿಸ್‌ರವರು ಈ ಗೌರವಕ್ಕೆ ಪಾತ್ರರಾದವರು ಎಂಬುದು ಹೆಮ್ಮೆಯ ಸಂಗತಿ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪ್ರತಿಷ್ಠಿತ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾದ ಪ್ರೊ॥ ಕೃ ನರಹರಿಯವರು ಹಾಗೂ ಶ್ರೀ ರಾಮಾಜೋಯಿಸ್‌ರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಈ ಇಬ್ಬರು ಹಿರಿಯ ಚೇತನಗಳಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಕೊಡುಗೆ ಮುಂದೆಯೂ ಬರಲಿದೆ ಎಂಬ ಆಶಯವನ್ನು ಶಿಕ್ಷಕ ಸಂಘ ಹೊಂದಿದೆ.

# ಸರ್ವಸದಸ್ಯರ ಸಭೆಯ ಚಿತ್ರಗಳು





**IF UNDELIVERED**
**PLEASE RETURN TO SENDER**

**Published for K.S.S.T.A. by K. Narahari**
**# 55, Yadavasmruthi, 1st Main, Sheshadripuram**
**Bangalore-560020. ✆ : 060-23466495**
**Printed at : RASHTROTTHANA MUDRANALAYA**
**Bangalore - 560 019.**

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com